ದಾಖಲಾತಿ ಸಂ.ಡಿ.ಎಲ್-(ಎನ್)04/007/2003-09

# ಭಾರತ ರಾಜ್ಯ ಪತ್ರ

ಅಸಾಧಾರಣ

ಭಾಗ 2 ಖಂಡ 1

ಪ್ರಾಧಿಕಾರದಿಂದ ಪ್ರಕಟಿಸಲ್ಪಟ್ಟದ್ದು

---

ಸಂ.39 ಹೊಸ ದೆಹಲಿ ಗುರುವಾರ ಆಗಸ್ಟ 27.2009/ ಭದ್ರ 5.1931

---

ಬೇರೆಯೇ ಸಂಪುಟದಂತೆ ಕಡತವಾಗಿಡಲು, ಆದೇಶದ ಈ ಭಾಗಕ್ಕೆ ಪ್ರತ್ಯೇಕ ಪುಟ ಸಂಖ್ಯೆ ನೀಡಲಾಗಿದೆ.

## ಕಾನೂನು ಮತ್ತು ನ್ಯಾಯ ಮಂತ್ರಾಲಯ

(ಶಾಸಕಾAಗ ವಿಭಾಗ)

ಹೊಸ ದೆಹಲಿ, 27ನೆಯ ಆಗಸ್ಟ, 2009/ ಭದ್ರ 5,1931 (ಶಕ)

ಈ ಕೆಳಗಿನ ಸಂಸತ್ತಿನ ಕಾಯಿದೆಯು 2009ರ ಆಗಸ್ಟ ತಿಂಗಳ 7ನೆಯ ದಿನ ರಾಷ್ಟ್ರಪತಿಗಳ ಸಮ್ಮತಿ ಪಡೆಯಿತು. ಮತ್ತು ಈ ಮೂಲಕ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲ್ಪಡುತ್ತಿದೆ:-

**ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009**

2009 ರ ಸಂ.35

[26 ಆಗಸ್ಟ 2009]

6 ರಿಂದ 14ರ ವರೆಗಿನ ವಯಸ್ಸಿನ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸಲು ಇರುವ ಕಾಯಿದೆ

ಭಾರತ ಗಣರಾಜ್ಯದ ಅರುವತ್ತನೆಯ ವರ್ಷದಲ್ಲಿ ಸಂಸತ್ತಿನಿಂದ ಕೆಳ ಕಂಡಂತೆ ನಿಯಮಿಸಲಾಗಿದೆ:-

# ಅಧ್ಯಾಯ I.

ಪ್ರಾರಂಭಿಕ

(ಕಿರು ಶೀರ್ಷಿಕೆ, ವ್ಯಾಪ್ತಿ ಮತ್ತು ಪ್ರಾರಂಭ.) ಸೂ: (ಬಲಗಡೆಯ ಮಾರ್ಜಿನ್ನಿನಲ್ಲಿದೆ)

1.(1)ಈ ಕಾಯಿದೆಯನ್ನು ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯಿದೆ, 2009 ಎಂದು ಕರೆಯಬಹುದು.

(2) ಇದು ಜಮ್ಮು ಮತ್ತು ಕಾಶ್ಮೀರವನ್ನು ಹೊರತುಪಡಿಸಿ ಸಂಪೂರ್ಣ ಭಾರತಕ್ಕೆ ವಿಸ್ತರಿಸುತ್ತದೆ.

(3) ಕೇಂದ್ರ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯನ್ನು ನಿಯಮಿಸಿದ ದಿನದಿಂದ ಇದು ಜಾರಿಗೆ ಬರುತ್ತದೆ.

..........................................................................................................................................



==========================================================

ವ್ಯಾಖ್ಯಾನಗಳು:- (ಎಡಗಡೆ ಮಾರ್ಜಿನ್‌ನಲ್ಲಿ)

2. ಈ ಶಾಸನದಲ್ಲಿ, ಸಂದರ್ಭ ಬೇರೊಂದನ್ನು ಬಯಸದೇ ಇದ್ದರೆ:-

(ಎ) "ಸಮುಚಿತ ಸರ್ಕಾರ" ಎಂದರೆ –

(i) ಕೇಂದ್ರ ಸರ್ಕಾರ, ಅಥವಾ ವಿಧಾನ ಮಂಡಲ ರಹಿತ ಕೇಂದ್ರಾಡಳಿತ ಪ್ರದೇಶದ ಆಡಳಿತಾಧಿಕಾರಿ ಸ್ಥಾಪಿಸಿದ ಅಥವಾ ಒಡೆತನದ, ಅಥವಾ ನಿಯಂತ್ರಣದಲ್ಲಿರುವ ಶಾಲೆಗಳಿಗೆ ಸಂಬಂಧಿಸಿದಂತೆ

(ii) ಕಲಂ (i) ರಲ್ಲಿ ಉಲ್ಲೇಖಿಸಿದ ಶಾಲೆಗಳನ್ನು ಹೊರತು ಪಡಿಸಿ, ರಾಜ್ಯದ ಗಡಿಯೊಳಗೆ

ಸ್ಥಾಪಿತವಾದ ಶಾಲೆಗಳಿಗೆ ಸಂಬಂಧಿಸಿದಂತೆ,

( ಎ) ಒಂದು ರಾಜ್ಯ, ರಾಜ್ಯ ಸರ್ಕಾರ

(ಬಿ) ವಿಧಾನ ಮಂಡಲ ಹೊಂದಿರುವ ಕೇಂದ್ರಾಡಳಿತ ರಾಜ್ಯಗಳಲ್ಲಿ ಸ್ಥಾಪಿತವಾದ ಶಾಲೆಗಳಿಗೆ ಸಂಬಂಧಿಸಿದಂತೆ ಆ ರಾಜ್ಯದ ಸರ್ಕಾರ.

(ಬಿ) "ಬಂಡವಾಳ ಶುಲ್ಕ" (ಕ್ಯಾಪಿಟೇಷನ್ ಫೀ) ಎಂದರೆ ಶಾಲೆಯಿಂದ ಪ್ರಕಟಿತವಾದ ಶುಲ್ಕಕ್ಕಿಂತ ಬೇರೆಯಾದ ಯಾವುದೇ ರೀತಿಯ ಚಂದಾ ಹಣ, ದೇಣಿಗೆ ಅಥವಾ ಪಾವತಿ.

(ಸಿ) "ಮಗು" ಎಂದರೆ 6ರಿಂದ 14ನೆಯ ವಯಸ್ಸಿನ ವರೆಗಿನ ಗಂಡು ಅಥವಾ ಹೆಣ್ಣುಮಗು.

(ಡಿ) “ಅನನುಕೂಲವುಳ್ಳ ಗುಂಪಿಗೆ ಸೇರಿದ ಮಕ್ಕಳು” ಎಂದರೆ ಅನುಸೂಚಿತ ಜಾತಿ, ಅನುಸೂಚಿತ ಬುಡಕಟ್ಟುಗಳು, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗ ಅಥವಾ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಭೌಗೋಳಿಕ, ಭಾಷಿಕ, ಲಿಂಗಸಂಬಂಧೀ ಅಥವಾ ಯಾವುದೇ ಅನ್ಯ ಕಾರಣಗಳಿಂದ ಹಿಂದುಳಿದವರು ಎಂದು ಸಮುಚಿತ ಸರ್ಕಾರ ಅಧಿಸೂಚನೆಯ ಮೂಲಕ ಗೊತ್ತುಪಡಿಸಿರುವವರು.

(ಇ) “ದುರ್ಬಲ ಗುಂಪಿಗೆ ಸೇರಿದ ಮಗು” ಎಂದರೆ, ಸಮುಚಿತ ಸರ್ಕಾರ ಅಧಿಸೂಚನೆಯ ಮೂಲಕ ನಿಗದಿ ಗೊಳಿಸಿದ ವಾರ್ಷಿಕ ಆದಾಯದ ಕನಿಷ್ಠ ಮಿತಿಗಿಂತ ಕಡಿಮೆ ವಾರ್ಷಿಕ ಆದಾಯ ಇರುವ ಪಾಲಕ ಅಥವಾ ಪೋಷಕರಿಗೆ ಸೇರಿದ ಮಗು,

(ಎಫ್) “ಪ್ರಾಥಮಿಕ ಶಿಕ್ಷಣ” ಎಂದರೆ ಒಂದನೆಯ ತರಗತಿಯಿಂದ ಎಂಟನೆಯ ತರಗತಿಯ ವರೆಗಿನ ಶಿಕ್ಷಣ.

(ಜಿ) “ಮಗುವಿಗೆ ಸಂಬಂಧಿಸಿದಂತೆ ಪೋಷಕ” ಎಂದರೆ ಸ್ವಾಭಾವಿಕವಾದ ಪೋಷಕ ಅಥವಾ ನ್ಯಾಯಾಲಯ ಅಥವಾ ಕಾನೂನಿನಿಂದ ಘೋಷಿಸಲ್ಪಟ್ಟ ಪೋಷಕರನ್ನೂ ಒಳಗೊಂಡಂತೆ, ಆ ಮಗುವಿನ ರಕ್ಷಣೆ ಮತ್ತು ಪಾಲನೆಯನ್ನು ಹೊಂದಿದವನು.

(ಎಚ್) “ಸ್ಥಳೀಯ ಪ್ರಾಧಿಕಾರ” ಎಂದರೆ ಮಹಾನಗರ ಪಾಲಿಕೆ, ಅಥವಾ ನಗರಪಾಲಿಕೆ, ಅಥವಾ ಜಿಲ್ಲಾ ಪರಿಷತ್ತು, ಅಥವಾ ನಗರ ಪಂಚಾಯತ್ ಅಥವಾ ಪಂಚಾಯತ್, ಮುಂತಾದ ಯಾವುದೇ ಹೆಸರುಗಳಿಂದ ಕರೆಯಲಾಗುವ, ಮತ್ತು ಶಾಲಾ ಆಡಳಿತದ ಮೇಲೆ ನಿಯಂತ್ರಣ ಹೊಂದಿರುವ, ಅಥವಾ ಆ ಸಮಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸ್ಥಳೀಯ ಪ್ರಾಧಿಕಾರದಂತೆ ಕಾರ್ಯ ನಿರ್ವಹಿಸಲು ನಗರ, ಪಟ್ಟಣ, ಅಥವಾ ಹಳ್ಳಿಗಳಲ್ಲಿ ಅಧಿಕಾರ ಪಡೆದ ಇನ್ನಿತರ ಪ್ರಾಧಿಕಾರ.

(ಐ) “ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ” ಎಂದರೆ 2005ರ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಕಾಯಿದೆ, ಪರಿಚ್ಛೇದ 3ರ ಅಡಿಯಲ್ಲಿ ರಚಿತವಾದ, ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ. 2006 ರ 4 ಸೂ:( ಬಲ ಮಾರ್ಜಿನ್ನಲ್ಲಿದೆ)

(ಜೆ) “ಅಧಿಸೂಚನೆ” ಎಂದರೆ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಲ್ಪಟ್ಟ ಅಧಿಸೂಚನೆ.

(ಕೆ) “ಹೆತ್ತವರು” ಎಂದರೆ ಮಗುವಿನ ಸ್ವಾಭಾವಿಕ ತಂದೆ ಅಥವಾ ಮಲ ತಂದೆ ಅಥವಾ ದತ್ತು ಸ್ವೀಕರಿಸಿದ ತಂದೆ ಅಥವಾ ತಾಯಿ

(ಎಲ್) “ನಿಗದಿತ” ಎಂದರೆ ಈ ಕಾಯಿದೆಯ ಅಡಿಯಲ್ಲಿ ನಿಗದಿ ಪಡಿಸಿದ ಕಟ್ಟಳೆಗಳು.

(ಎಮ್) “ಅನುಸೂಚಿ” ಎಂದರೆ ಈ ಕಾಯಿದೆಗೆ ಅನುಬಂಧಿಸಿದ ಅನುಸೂಚಿ.

(ಎನ್) “ಶಾಲೆ” ಎಂದರೆ, ಕೆಳಗಿನವುಗಳನ್ನು ಒಳಗೊಂಡಂತೆ, ಪ್ರಾಥಮಿಕ ಶಿಕ್ಷಣ ನೀಡುತ್ತಿರುವ ಯಾವುದೇ ಮಾನ್ಯತೆ ಪಡೆದಿರುವ ಶಾಲೆ

(i) ಸಮುಚಿತ ಸರ್ಕಾರದಿಂದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪನೆಗೊಂಡ, ಅದರ ಒಡೆತನದಲ್ಲಿರುವ, ಅಥವಾ ಅದರಿಂದ ನಿಯಂತ್ರಿಸಲ್ಪಡುವ ಶಾಲೆ;

(ii) ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ತನ್ನ ಖರ್ಚು ವೆಚ್ಚಗಳಿಗೆ ಯಾವುದೇ ರೀತಿಯ ಪೂರ್ಣ ಅಥವಾ ಭಾಗಶಃ ಸಹಾಯ ಅಥವಾ ಧನ ಸಹಾಯ ಪಡೆಯುತ್ತಿರುವ ಅನುದಾನಿತ ಶಾಲೆ;

(iii ) ನಿರ್ದಿಷ್ಟ ವರ್ಗಕ್ಕೆ ಸೇರಿದ ಶಾಲೆ;

(iv) ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ತನ್ನ ಖರ್ಚು ವೆಚ್ಚಗಳಿಗೆ ಯಾವುದೇ ರೀತಿಯ ಪೂರ್ಣ ಅಥವಾ ಭಾಗಶಃ ಸಹಾಯ ಅಥವಾ ಧನ ಸಹಾಯ ಸ್ವೀಕರಿಸದೇ ಇರುವ ಅನುದಾನಿತವಲ್ಲದ ಶಾಲೆ;

(ಒ) “ಪ್ರವೇಶ ಪರೀಕ್ಷೆ ವಿಧಾನ”ಎಂದರೆ ಯಾದೃಚ್ಛಿಕ ವಿಧಾನವನ್ನು ಹೊರತು ಪಡಿಸಿ ಪ್ರವೇಶಾತಿಗಾಗಿ ಒಂದು ಮಗುವಿಗಿಂತ ಇನ್ನೊಂದು ಮಗುವನ್ನು ಆದ್ಯತೆಯ ಮೇಲೆ ಆಯ್ದುಕೊಳ್ಳುವ ಆಯ್ಕೆಯ ವಿಧಾನ.

*****************************************************************************************



=================================================================

(ಪಿ) “ನಿರ್ದಿಷ್ಟಪಡಿಸಿದ ವರ್ಗ” ಎಂದರೆ, ಶಾಲೆಗೆ ಸಂಬಂಧಿಸಿದಂತೆ, ಕೇಂದ್ರೀಯ ವಿದ್ಯಾಲಯ, ನವೋದಯ ವಿದ್ಯಾಲಯ, ಸೈನಿಕ ಶಾಲೆ, ಅಥವಾ ವಿಶಿಷ್ಟ ಗುಣ ಲಕ್ಷಣಗಳುಳ್ಳ, ಸಮುಚಿತ ಸರ್ಕಾರದಿಂದ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದ ಶಾಲೆ;

(ಕ್ಯೂ) “ಮಕ್ಕಳ ಹಕ್ಕಿನ ರಕ್ಷಣೆಯ ರಾಜ್ಯ ಆಯೋಗ” ಎಂದರೆ 2005ರ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಕಾಯಿದೆ, ಪರಿಚ್ಛೇದ 3ರ ಅಡಿಯಲ್ಲಿ ರಚಿತವಾದ, ಮಕ್ಕಳ ಹಕ್ಕುಗಳ ರಕ್ಷಣಾ ರಾಜ್ಯ ಆಯೋಗ.

2006ರ 4 (ಎಡಗಡೆಯ ಮಾರ್ಜಿನ್ನಿನಲ್ಲಿದೆ)

## ಅಧ್ಯಾಯ II

### ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು

(ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಗುವಿನ ಹಕ್ಕು) ಸೂ:(ಬಲಗಡೆಯ ಮಾರ್ಜಿನ್ನಿನಲ್ಲಿದೆ)

3. (1) ಆರರಿಂದ ಹದಿನಾಲ್ಕನೆಯ ವಯಸ್ಸಿನ ವರೆಗಿನ ವಯಸ್ಸಿನ ಪ್ರತಿ ಮಗುವು ನೆರೆಹೊರೆಯಲ್ಲಿರುವ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪೂರ್ತಿಗೊಳ್ಳುವ ತನಕ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹೊಂದುವ ಹಕ್ಕನ್ನು ಹೊಂದಿದೆ.

(2) ಉಪಬಂಧ (1)ರ ಉದ್ದೇಶಕ್ಕಾಗಿ, ಯಾವ ಮಗುವೂ ತನ್ನ ಪ್ರಾಥಮಿಕ ಶಿಕ್ಷಣವನ್ನು ಪಡೆಯಲು ಮತ್ತು ಸಂಪೂರ್ಣಗೊಳಿಸಲು ಅಡ್ಡಿಯಾಗುವಂತಹ ಯಾವುದೇ ರೀತಿಯ ಶುಲ್ಕ ಅಥವಾ ವೆಚ್ಚವನ್ನು ಪಾವತಿಸಲು ಬಾಧ್ಯವಾಗಿರುವುದಿಲ್ಲ.

1996ರ ಅಸಾಮರ್ಥ್ಯವುಳ್ಳ ವ್ಯಕ್ತಿಗಳ (ಸಮಾನ ಅವಕಾಶಗಳು, ರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಕಾಯಿದೆಯ ಪರಿಚ್ಛೇದ 2ರ ಕಲಂ (1)ರಲ್ಲಿ ವ್ಯಾಖ್ಯಾನಿಸಿರುವಂತೆ ಅಸಾಮರ್ಥ್ಯದಿಂದ ಬಳಲುತ್ತಿರುವ ಮಗು ಸದರಿ ಕಾಯಿದೆಯ ಅಧ್ಯಾಯ 5 ರಲ್ಲಿ ನೀಡಿರುವ ನಿಬಂಧನೆಗಳಿಗೆ ಅನುಸಾರವಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹೊಂದುವ ಹಕ್ಕು ಹೊಂದಿರುತ್ತದೆ.

1996 ರ 1 ಸೂ:(ಎಡಗಡೆಯ ಮಾರ್ಜಿನ್ನಿನಲ್ಲಿದೆ)

(ಪ್ರಾಥಮಿಕ ಶಿಕ್ಷಣಕ್ಕೆ ಪ್ರವೇಶಾತಿ ಹೊಂದದಿರುವ ಅಥವಾ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸದಿರುವ ಮಕ್ಕಳಿಗೆ ವಿಶೇಷ ನಿಬಂಧನೆಗಳು)-ಬಲಬದಿಯ ಮಾರ್ಜಿನ್

4. ಮಗು ಆರು ವರ್ಷ ವಯಸ್ಸಿಗೆ ಮೇಲ್ಪಟ್ಟಿದ್ದು ಯಾವುದೇ ಶಾಲೆಗೆ ಪ್ರವೇಶ ಪಡೆಯದಿದ್ದಲ್ಲಿ ಅಥವಾ ಪ್ರವೇಶ ಪಡೆದರೂ, ಆತನ ಅಥವಾ ಆಕೆಯ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸದಿದ್ದಲ್ಲಿ, ಆತನ ಅಥವಾ ಆಕೆಯ ವಯಸ್ಸಿಗೆ ಅನುಗುಣವಾದ ತರಗತಿಗೆ ಪ್ರವೇಶಗೊಳಿಸತಕ್ಕದ್ದು;

ಹಾಗಾದ ಪಕ್ಷದಲ್ಲಿ, ಮಗುವನ್ನು ನೇರವಾಗಿ ಆತನ ಅಥವಾ ಆಕೆಯ ವಯಸ್ಸಿಗೆ ಅನುಗುಣವಾದ ತರಗತಿಗೆ ಸೇರ್ಪಡೆಗೊಳಿಸಿದ ಸಂದರ್ಭದಲ್ಲಿ ಆತ ಅಥವಾ ಆಕೆ ಕಲಿಕೆಯಲ್ಲಿ ಇನ್ನಿತರೆ ಮಕ್ಕಳ ಜೊತೆ ಸಮವಾಗಿರಲು, ಅಗತ್ಯ ಕಾಲಮಿತಿಯೊಳಗೆ ಬೇಕಾದ ನಿಗದಿತ ವಿಶೇಷ ತರಬೇತಿ ಹೊಂದುವ ಹಕ್ಕು ಹೊಂದಿರುತ್ತಾನೆ/ಳೆ.

ಹಾಗಾದ ಪಕ್ಷದಲ್ಲಿ, ಈ ರೀತಿ ಪ್ರವೇಶಾತಿ ಗಳಿಸಿದ ಮಗು ಹದಿನಾಲ್ಕನೇ ವರ್ಷದ ನಂತರವೂ, ಪ್ರಾಥಮಿಕ ಶಿಕ್ಷಣವನ್ನು ಪೂರ್ಣ ಗೊಳಿಸುವ ವರೆಗೂ, ಉಚಿತ ಮತ್ತು ಕಡ್ಡಾಯ ಶಿಕ್ಷಣ ಹೊಂದಲು ಹಕ್ಕುಗಳನ್ನು ಹೊಂದಿರುತ್ತದೆ.

(ಬೇರೆ ಶಾಲೆಗಳಿಗೆ ವರ್ಗಾವಣೆಯ ಹಕ್ಕು) ಸೂ: (ಬಲಗಡೆಯ ಮಾರ್ಜಿನ್ನಿನಲ್ಲಿದೆ)

5.(1) ಒಂದು ಶಾಲೆಯಲ್ಲಿ ಮಗುವಿಗೆ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವ ಅನುಕೂಲವಿಲ್ಲದಿದ್ದಲ್ಲಿ, ಆ ಮಗುವಿಗೆ ತನ್ನ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಲು, ಪರಿಚ್ಛೇದ 2ರ ಕಲಂ (ಎನ್)ನ ಉಪಕಲಂ (iii) ಮತ್ತು (iv)ರಲ್ಲಿ ನಿಗದಿ ಪಡಿಸಿದ ಶಾಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಶಾಲೆಗೆ ವರ್ಗಾವಣೆಯಾಗುವ ಹಕ್ಕನ್ನು ಹೊಂದಿರುತ್ತದೆ.

(2) ಒಂದು ಮಗುವಿಗೆ ಯಾವುದೇ ಕಾರಣಕ್ಕೆ ರಾಜ್ಯದ ಒಳಗೆ ಅಥವಾ ಹೊರಗೆ ಒಂದು ಶಾಲೆಯಿಂದ ಇನ್ನೊಂದು ಶಾಲೆಗೆ ಹೋಗುವ ಅಗತ್ಯವಿದ್ದಲ್ಲಿ ತನ್ನ ಪ್ರಾಥಮಿಕ ಶಿಕ್ಷಣ ಪೂರೈಸಲು ಪರಿಚ್ಛೇದ 2ರ ಕಲಂ (ಎನ್)ನ ಉಪಕಲಂ (iii) ಮತ್ತು (iv)ರಲ್ಲಿ ನಿಗದಿ ಪಡಿಸಿದ ಶಾಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಶಾಲೆಗೆ ವರ್ಗಾವಣೆಯಾಗುವ ಹಕ್ಕನ್ನು ಹೊಂದಿರುತ್ತದೆ.

(3) ಹೀಗೆ ಬೇರೆ ಶಾಲೆಯಲ್ಲಿ ಪ್ರವೇಶಾತಿ ಪಡೆಯಲು, ಆ ಮಗು ಹಿಂದೆ ಪ್ರವೇಶ ಪಡೆದಿದ್ದ ಶಾಲೆಯ ಮುಖ್ಯೋಪಾಧ್ಯಾಯರು ಅಥವಾ ಪ್ರಭಾರದಲ್ಲಿರುವವರು, ತತ್‌ಕ್ಷಣವೇ ವರ್ಗಾವಣೆ ಪತ್ರವನ್ನು ನೀಡತಕ್ಕದ್ದು:

ಹಾಗಾದ ಪಕ್ಷದಲ್ಲಿ ಅಂತಹ ಇನ್ನೊಂದು ಶಾಲೆಯಲ್ಲಿ, ವರ್ಗಾವಣೆ ಪತ್ರ ಹಾಜರು ಪಡಿಸಲು ವಿಳಂಬವಾದ ಮಾತ್ರಕ್ಕೆ ಅದು ಪ್ರವೇಶಾತಿಯ ನಿರಾಕರಣೆಗೆ ಅಥವಾ ವಿಳಂಬಕ್ಕೆ ಮಾಡಲು ಕಾರಣವಾಗತಕ್ಕದ್ದಲ್ಲ;

ಮುಂದುವರೆದಂತೆ, ಹಾಗಾದ ಪಕ್ಷದಲ್ಲಿ, ವರ್ಗಾವಣೆ-ಪತ್ರ ನೀಡಬೇಕಿದ್ದ ಶಾಲೆಯ ಮುಖ್ಯೋಪಾಧ್ಯಾಯ ಅಥವಾ ಪ್ರಭಾರಿ ಅಧಿಕಾರಿ ವರ್ಗಾವಣೆ-ಪತ್ರ ನೀಡಲು ವಿಳಂಬಿಸಿದಲ್ಲಿ, ಆತನಿಗೆ ಅಥವಾ ಆಕೆಗೆ ಅನ್ವಯವಾಗುವ ಸೇವಾ ನಿಯಮಗಳ ಅಡಿಯಲ್ಲಿ ಶಿಸ್ತಿನ ಕ್ರಮಕ್ಕೆ ಅವರು ಒಳಪಡುತ್ತಾರೆ.

## ಅಧ್ಯಾಯ III

**( ಶಾಲೆ ಸ್ಥಾಪಿಸುವಲ್ಲಿ ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳ ಕರ್ತವ್ಯ) (ಬಲ ಮಾರ್ಜಿನ್ನಲ್ಲಿದೆ)**

### ಸಮುಚಿತ ಸರ್ಕಾರ, ಸ್ಥಳೀಯ ಪ್ರಾಧಿಕಾರ ಮತ್ತು ಪೋಷಕರ ಕರ್ತವ್ಯಗಳು

6. ಈ ಕಾಯಿದೆಯಲ್ಲಿರುವ ನಿಬಂಧನೆಗಳನ್ನು ಆಚರಣೆಗೆ ತರಲು, ಈ ಕಾಯಿದೆಯನ್ನು ಪ್ರಾರಂಭಿಸಿದ ಮೂರು ವರ್ಷಗಳ ಅವಧಿಯೊಳಗಾಗಿ ನಿಗದಿತವಾಗುವ ಪ್ರದೇಶದಲ್ಲಿ ಅಥವಾ ನೆರೆ-ಹೊರೆಯ ಮಿತಿಯಲ್ಲಿ, ಶಾಲೆ ಸ್ಥಾಪಿತವಾಗದಿದ್ದಲ್ಲಿ, ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಶಾಲೆಯನ್ನು ಸ್ಥಾಪ್ತಿತಕ್ಕದ್ದು.

................................................................................



(ಆರ್ಥಿಕ ಮತ್ತು ಇತರ ಜವಾಬ್ದಾರಿಗಳನ್ನು ಹಂಚಿಕೊಳ್ಳುವುದು) (ಎಡ ಮಾರ್ಜಿನ್ನಲ್ಲಿದೆ)

7. (1) ಈ ಱಕಾಯಿದೆಯ ನಿಬಂಧನೆಗಳನ್ನು ಆಚರಣೆಗೆ ತರಲು ಬೇಕಾಗುವ ನಿಧಿ ಒದಗಿಸುವಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು, ಜಂಟಿ ಜವಾಬ್ದಾರಿಯನ್ನು ವಹಿಸಿಕೊಳ್ಳತಕ್ಕದ್ದು.

(2), ಈ ಕಾಯಿದೆಯಲ್ಲಿರುವ ನಿಬಂಧನೆಗಳನ್ನು ಆಚರಣೆಗೆ ತರಲು ಬೇಕಾದ ಬಂಡವಾಳ ಮತ್ತು ಆವರ್ತನ ವೆಚ್ಚಗಳ ಬಗೆಗೆ ಅಂದಾಜುಗಳನ್ನು ಕೇಂದ್ರ ಸರ್ಕಾರವು ಸಿದ್ಧ ಪಡಿಸ ತಕ್ಕದ್ದು.

(3) ಕೇಂದ್ರ ಸರ್ಕಾರ, ಉಪಬಂಧ (2)ರಲ್ಲಿ ಉಲ್ಲೇಖಿಸಲಾದ, ಕಾಲದಿಂದ ಕಾಲಕ್ಕೆ ರಾಜ್ಯ ಸರ್ಕಾರಗಳ ಜೊತೆ ಸಮಾಲೋಚನೆಯಿಂದ ಅದು ನಿರ್ಧರಿಸ ಬಹುದಾದ ಶೇಕಡಾವಾರು ವೆಚ್ಚವನ್ನು ಕಂದಾಯದಿಂದ ಅನುದಾನಗಳಾಗಿ ರಾಜ್ಯ ಸರ್ಕಾರಗಳಿಗೆ ಒದಗಿಸತಕ್ಕದ್ದು.

(4) ಈ ಕಾಯಿದೆಯ ನಿಬಂಧನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೋಸ್ಕರವಾಗಿ ತನ್ನ ಪಾಲಿನ ಹಣಕಾಸನ್ನು ರೂಢಿಸಿಕೊಳ್ಳಲು ಅನುಕೂಲವಾಗುವಂತೆ ಯಾವುದೇ ರಾಜ್ಯ ಸರ್ಕಾರಕ್ಕೆ ಹೆಚ್ಚುವರಿ ಹಣಕಾಸಿನ ಅಗತ್ಯವನ್ನು ಪರಿಶೀಲಿಸಲು ಹಣಕಾಸು ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಕೇಂದ್ರ ಸರ್ಕಾರವು 280ನೇ ವಿಧಿಯ ಕಲಂ (3)ರ ಉಪಕಲಂ (ಡಿ) ಅಡಿಯಲ್ಲಿ ರಾಷ್ಟ್ರಪತಿಗಳಿಗೆ ಕೋರಿಕೆ ಸಲ್ಲಿಸಬಹುದಾಗಿದೆ.

(5) ಉಪಬಂಧ (4)ರಲ್ಲಿರುವ ಯಾವುದನ್ನೂ ಪರಿಗಣನೆಗೆ ತೆಗೆದುಕೊಳ್ಳದೆ, ರಾಜ್ಯ ಸರ್ಕಾರವು ಉಪಬಂಧ (3)ರ ಅಡಿಯಲ್ಲಿ ಕೇಂದ್ರ ಸರ್ಕಾರ ರಾಜ್ಯಸರ್ಕಾರಕ್ಕೆ ನೀಡಿರುವ ಹಣಕಾಸಿನ ಮೊತ್ತ ಮತ್ತು ತನ್ನದೇ ಇತರ ಸಂಪನ್ಮೂಲಗಳನ್ನು ಗಮನಕ್ಕೆ ತೆಗೆದುಕೊಂಡು, ಈ ಕಾಯಿದೆಯ ನಿಬಂಧನೆಗಳನ್ನು ಜಾರಿಗೊಳಿಸುವುದಕ್ಕೆ ನಿಧಿ ಒದಗಿಸಲು ಬಾಧ್ಯಸ್ಥವಾಗಿರುತ್ತದೆ.

(6) ಕೇಂದ್ರ ಸರ್ಕಾರವು—

(ಎ) ಪರಿಚ್ಛೇದ 29 ರ ಅಡಿಯಲ್ಲಿ ಸೂಚಿತವಾದ ಶೈಕ್ಷಣಿಕ ಪರಿಣಿತರ ಸಹಾಯದಿಂದ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು ಅಭಿವೃದ್ಧಿಗೊಳಿಸತಕ್ಕದ್ದು.

(ಬಿ) ಶಿಕ್ಷಕರ ತರಬೇತಿಗೆ ಮಾನದಂಡ ಅಭಿವೃದ್ಧಿಗೊಳಿಸಿ ಜಾರಿಗೊಳಿಸುವುದು.

(ಸಿ) ನವೀನ ಆವಿಷ್ಕಾರಗಳು, ಸಂಶೋಧನೆಗಳು, ಯೋಜನೆ ಮತ್ತು ಸಾಮರ್ಥ್ಯ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರಕ್ಕೆ ತಾಂತ್ರಿಕ ಸಹಾಯ, ಮತ್ತು ಸಂಪನ್ಮೂಲಗಳನ್ನು ಒದಗಿಸುವುದು.

(ಸಮುಚಿತ ಸರ್ಕಾರದ ಕರ್ತವ್ಯಗಳು) (ಎಡ ಮಾರ್ಜಿನ್ನಿನಲ್ಲಿದೆ)

8. ಸಮುಚಿತ ಸರ್ಕಾರವು—

(ಎ) ಪ್ರತಿ ಮಗುವಿಗೂ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸುವುದು:

ಹಾಗೆ ಒದಗಿಸಿದ ಪಕ್ಷದಲ್ಲಿ, ಮಗು ಸಂದರ್ಭಕ್ಕನುಸಾರವಾಗಿ ಆತನ ಅಥವಾ ಆಕೆಯ ಪೋಷಕರು ಅಥವಾ ಪಾಲಕರಿಂದ ಸೂಕ್ತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿಸಲ್ಪಡದ, ಮಾಲೀಕತ್ವ ಹೊಂದಿರದ, ನಿಯಂತ್ರಸಲ್ಪಡದಿರುವ, ನೇರವಾಗಿ ಅಥವಾ ಪರೋಕ್ಷವಾಗಿ ನಿಧಿಗಳ ಮೂಲಕ ಆರ್ಥಿಕವಾಗಿ ಸಹಾಯ ಪಡೆಯದಿರುವ ಬೇರೆ ಶಾಲೆಯಲ್ಲಿ ಪ್ರವೇಶಾತಿ ಹೊಂದಿದ್ದರೆ ಅಂತಹ ಮಗು ಅಥವಾ ಸಂದರ್ಭಕ್ಕನುಗುಣವಾಗಿ ಆತನ ಅಥವಾ ಆಕೆಯ ಪೋಷಕರು ಅಥವಾ ಪಾಲಕರು, ಆ ಮಗುವಿಗೆ ಅಂತಹ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ಮಾಡಿದ ವೆಚ್ಚವನ್ನು ತುಂಬಿ ಕೊಡುವಂತೆ ಹಕ್ಕೊತ್ತಾಯ ಮಾಡಲು ಹಕ್ಕುದಾರರಾಗಿರುವುದಿಲ್ಲ.

ವಿವರಣೆ—"ಕಡ್ಡಾಯ ಶಿಕ್ಷಣ" ಎನ್ನುವ ಪದ ಸಮುಚಿತ ಸರ್ಕಾರದ ಕೆಳಗಿನ ಹೊಣೆಗಾರಿಕೆಗಳನ್ನು ವಿವರಿಸುತ್ತದೆ.

(i) ಆರರಿಂದ ಹದಿನಾಲ್ಕರ ವರೆಗಿನ ವಯಸ್ಸಿನ ಎಲ್ಲ ಮಕ್ಕಳಿಗೂ ಶಿಕ್ಷಣ ಒದಗಿಸುವುದು; ಮತ್ತು

(ii) ಆರರಿಂದ ಹದಿನಾಲ್ಕರವರೆಗಿನ ವಯಸ್ಸಿನ ಎಲ್ಲ ಮಕ್ಕಳ ಕಡ್ಡಾಯ ಪ್ರವೇಶಾತಿ, ಹಾಜರಾತಿ ಮತ್ತು ಪ್ರಾಥಮಿಕ ಶಿಕ್ಷಣದ ಪೂರ್ಣಗೊಳಿಸುವಿಕೆಯನ್ನು ಖಾತರಿ ಪಡಿಸುವುದು;

(ಬಿ) ಪರಿಚ್ಛೇದ 6 ರಲ್ಲಿ ಸೂಚಿಸಿದಂತೆ ನೆರೆಹೊರೆಯಲ್ಲಿ ಶಾಲೆಯನ್ನು ಹೊಂದಿರುವುದನ್ನು ಖಾತರಿ ಪಡಿಸುವುದು;

(ಸಿ) ದುರ್ಬಲ ವರ್ಗಕ್ಕೆ ಸೇರಿದ ಮಗು ಮತ್ತು ಅನನುಕೂಲಿತ ಗುಂಪುಗಳಿಗೆ ಸೇರಿದ ಮಗು, ಯಾವುದೇ ಆಧಾರದ ಮೇಲೆ ತಾರತಮ್ಯಕ್ಕೊಳಗಾಗಿಲ್ಲ ಮತ್ತು ಪ್ರಾಥಮಿಕ ಶಿಕ್ಷಣ ಪಡೆಯುವುದರಿಂದ ವಂಚಿತವಾಗಿಲ್ಲ ಎಂದು ಖಾತರಿ ಪಡಿಸುವುದು;

(ಡಿ) ಶಾಲಾ ಕಟ್ಟಡ, ಬೋಧಕ ಸಿಬ್ಬಂದಿ, ಕಲಿಕಾ ಸಾಮಗ್ರಿ ಮುಂತಾದ ಮೂಲ ಸೌಕರ್ಯಗಳನ್ನು ಒದಗಿಸುವುದು;

(ಇ) ಪರಿಚ್ಛೇದ 4 ರಲ್ಲಿ ಸೂಚಿಸಿದ ವಿಶೇಷ ತರಬೇತಿಯ ಸೌಲಭ್ಯ ಒದಗಿಸುವುದು;

(ಎಫ್) ಪ್ರತಿ ಮಗುವಿನ ಪ್ರವೇಶಾತಿ, ಹಾಜರಾತಿ ಮತ್ತು ಪ್ರಾಥಮಿಕ ಶಿಕ್ಷಣದ ಮುಕ್ತಾಯವನ್ನು ನಿಗಾವಹಿಸಿ ಖಾತರಿಪಡಿಸುವುದು;

(ಜಿ) ಪ್ರಾಥಮಿಕ ಶಿಕ್ಷಣದ ಗುಣಮಟ್ಟವು ಅನುಸೂಚಿಯಲ್ಲಿ ನಿಗದಿಗೊಳಿಸಿದ ಮಾನದಂಡ ಮತ್ತು ಮಾಪನ ಮಟ್ಟಗಳಿಗೆ ಅನುಗುಣವಾಗಿದೆ ಎಂದು ಖಾತರಿ ಪಡಿಸಿಕೊಳ್ಳುವುದು;

*****************************************************************************************



---

(ಎಚ್) ಪ್ರಾಥಮಿಕ ಶಿಕ್ಷಣಕ್ಕೆ ಸಕಾಲಿಕವಾಗಿ ಪಠ್ಯಕ್ರಮ ನಿಗದಿಗೊಳಿಸುವಿಕೆ ಹಾಗೂ ಅಧ್ಯಯನದ ಮಾರ್ಗಗಳನ್ನೂ ನಿಗದಿಮಾಡುಡುವುದನ್ನು ಖಾತರಿ ಪಡಿಸಿಕೊಳ್ಳುವುದು; ಮತ್ತು

(ಐ) ಶಿಕ್ಷಕರಿಗೆ ತರಬೇತಿ ಸೌಲಭ್ಯವನ್ನು ಒದಗಿಸುವುದು.

(ಸ್ಥಳೀಯ ಪ್ರಾಧಿಕಾರದ ಕರ್ತವ್ಯಗಳು) (ಬಲ ಮಾರ್ಜಿನ್ನಿನಲ್ಲಿದೆ)

9. ಪ್ರತಿ ಸ್ಥಳೀಯ ಪ್ರಾಧಿಕಾರವೂ ಕೂಡಾ—

(ಎ) ಪ್ರತಿ ಮಗುವಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸುವುದು:

ಹಾಗೆ ಒದಗಿಸಿದ ಪಕ್ಷದಲ್ಲಿ, ಮಗು ಸಂದರ್ಭಕ್ಕನುಸಾರವಾಗಿ ಆತನ ಅಥವಾ ಆಕೆಯ ಪೋಷಕರು ಅಥವಾ ಪಾಲಕರಿಂದ ಸೂಕ್ತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿಸಲ್ಪಡದ, ಮಾಲೀಕತ್ವ ಹೊಂದಿರದ, ನಿಯಂತ್ರಸಲ್ಪಡದಿರುವ, ನೇರವಾಗಿ ಅಥವಾ

ಪರೋಕ್ಷವಾಗಿ ನಿಧಿಗಳ ಮೂಲಕ ಆರ್ಥಿಕವಾಗಿ ಸಹಾಯ ಪಡೆಯದಿರುವ ಬೇರೆ ಶಾಲೆಯಲ್ಲಿ ಪ್ರವೇಶಾತಿ ಹೊಂದಿದ್ದರೆ ಅಂತಹ ಮಗು ಅಥವಾ ಸಂದರ್ಭಕ್ಕನುಗುಣವಾಗಿ ಆತನ ಅಥವಾ ಆಕೆಯ ಪೋಷಕರು ಅಥವಾ ಪಾಲಕರು, ಆ ಮಗುವಿಗೆ ಅಂತಹ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ಮಾಡಿದ ವೆಚ್ಚವನ್ನು ತುಂಬಿ ಕೊಡುವಂತೆ ಹಕ್ಕೊತ್ತಾಯ ಮಾಡಲು ಹಕ್ಕುದಾರರಾಗಿರುವುದಿಲ್ಲ.

(ಬಿ) ಪರಿಚ್ಛೇದ 6 ರಲ್ಲಿ ನಿಗದಿಗೊಳಿಸಿದಂತೆ ನೆರೆಹೊರೆಯಲ್ಲಿ ಶಾಲೆಯ ಲಭ್ಯತೆಯನ್ನು ಖಾತರಿ ಪಡಿಸಿಕೊಳ್ಳುವುದು;

(ಸಿ) ದುರ್ಬಲ ವರ್ಗಕ್ಕೆ ಸೇರಿದ ಮಗು ಮತ್ತು ಅನನುಕೂಲಿತ ಗುಂಪುಗಳಿಗೆ ಸೇರಿದ ಮಗು, ಯಾವುದೇ ಆಧಾರದ ಮೇಲೆ ತಾರತಮ್ಯಕ್ಕೊಳಗಾಗಿಲ್ಲ ಮತ್ತು ಪ್ರಾಥಮಿಕ ಶಿಕ್ಷಣ ಪಡೆಯುವುದರಿಂದ ವಂಚಿತವಾಗಿಲ್ಲ ಎಂದು ಖಾತರಿ ಪಡಿಸುವುದು;

(ಡಿ) ತನ್ನ ಅಧಿಕಾರ ವ್ಯಾಪ್ತಿಯಲ್ಲಿ ವಾಸಿಸುವ ಹದಿನಾಲ್ಕು ವರ್ಷ ವಯೋಮಾನದ ವರೆಗಿನ ಮಕ್ಕಳ ದಾಖಲಾತಿಗಳನ್ನು, ನಿರ್ದೇಶಿತ ಕ್ರಮದಲ್ಲಿ ಪಾಲಿಸಿಕೊಂಡು ಬರುವುದು;

(ಇ) ತನ್ನ ಅಧಿಕಾರ ವ್ಯಾಪ್ತಿಯಲ್ಲಿ ವಾಸಿಸುವಪ್ರತಿ ಮಗುವಿನ ಪ್ರವೇಶಾತಿ, ಹಾಜರಾತಿ ಮತ್ತು ಪ್ರಾಥಮಿಕ ಶಿಕ್ಷಣದ ಮುಕ್ತಾಯವನ್ನು ನಿಗಾವಹಿಸುವುದು ಮತ್ತು ಖಾತರಿ ಪಡಿಸುವುದು;

(ಎಫ್) ಶಾಲಾ ಕಟ್ಟಡ, ಬೋಧಕ ಸಿಬ್ಬಂದಿ, ಕಲಿಕಾ ಸಾಮಗ್ರಿ ಮುಂತಾದ ಮೂಲ ಸೌಕರ್ಯಗಳನ್ನು ಒದಗಿಸುವುದು;

(ಜಿ) ಪರಿಚ್ಛೇದ 4 ರಲ್ಲಿ ಸೂಚಿಸಿದ ವಿಶೇಷ ತರಬೇತಿಯ ಸೌಲಭ್ಯ ಒದಗಿಸುವುದು;

(ಎಚ್) ಪ್ರಾಥಮಿಕ ಶಿಕ್ಷಣದ ಗುಣಮಟ್ಟವು ಅನುಸೂಚಿಯಲ್ಲಿ ನಿಗದಿ ಗೊಳಿಸಿದ ಮಾನದಂಡ ಮತ್ತು ಮಾಪನ ಮಟ್ಟಗಳಿಗೆ ಅನುಗುಣವಾಗಿದೆ ಎಂದು ಖಾತರಿ ಪಡಿಸಿಕೊಳ್ಳುವುದು;

(ಐ) ಪ್ರಾಥಮಿಕ ಶಿಕ್ಷಣಕ್ಕೆ ಸಕಾಲಿಕವಾಗಿ ಪಠ್ಯಕ್ರಮ ನಿಗದಿಗೊಳಿಸುವಿಕೆ ಹಾಗೂ ಅಧ್ಯಯನದ ಮಾರ್ಗಗಳನ್ನೂ ನಿಗದಿಮಾಡುಡುವುದನ್ನು ಖಾತರಿ ಪಡಿಸಿಕೊಳ್ಳುವುದು.

(ಜೆ)ಶಿಕ್ಷಕರಿಗೆ ತರಬೇತಿ ಸೌಲಭ್ಯವನ್ನು ಒದಗಿಸುವುದು.

(ಕೆ) ವಲಸಿತ ಕುಟುಂಬಗಳ ಮಕ್ಕಳಿಗೆ ಪ್ರವೇಶಾತಿಯನ್ನು ಖಾತರಿಪಡಿಸುವುದು;

(ಎಲ್) ಕಾರ್ಯ ವ್ಯಾಪ್ತಿಯೊಳಗಿನ ಶಾಲೆಗಳ ಕಾರ್ಯದ ಮೇಲೆ ನಿಗಾ ವಹಿಸುವುದು; ಮತ್ತು

(ಎಮ್) ಶೈಕ್ಷಣಿಕ ವೇಳಾ ಪಟ್ಟಿಯನ್ನು ನಿರ್ಧರಿಸುವುದು.

(ಪಾಲಕರು ಮತ್ತು ಪೋಷಕರ ಕರ್ತವ್ಯಗಳು) ( ಬಲ ಮಾರ್ಜಿನ್ನಿನಲ್ಲಿದೆ)

10 ತಮ್ಮ ಮಗು ಅಥವಾ ತಮ್ಮ ಪೋಷಣೆಯಲ್ಲಿ ಮಗುವಿದ್ದರೆ ಆ ಮಗುವನ್ನು ನೆರೆಹೊರೆಯಲ್ಲಿರುವ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ಸೇರ್ಪಡೆಗೊಳಿಸುವುದು ಅಥವಾ ಸೇರ್ಪಡೆಗೆ ಕಾರಣಕರ್ತರಾಗುವುದು ಪ್ರತಿ ಪಾಲಕರು ಅಥವಾ ಪೋಷಕರ ಜವಾಬ್ದಾರಿಯಾಗಿರುತ್ತದೆ.

(ಸಮುಚಿತ ಸರ್ಕಾರ ಪೂರ್ವ-ಪ್ರಾಥಮಿಕ ಶಿಕ್ಷಣ ಒದಗಿಸುವುದು) ( ಬಲ ಮಾರ್ಜಿನ್ನಿನಲ್ಲಿದೆ)

11.ಮೂರು ವರ್ಷ ವಯಸ್ಸು ಮೀರಿದ ಮಕ್ಕಳನ್ನು ಪ್ರಾಥಮಿಕ ಶಿಕ್ಷಣಕ್ಕೆ ಸಿದ್ಧಪಡಿಸುವ ಮತ್ತು ಎಳೆಯ ಮಕ್ಕಳ ಪೋಷಣೆಯ ದೃಷ್ಟಿಯಿಂದ, ಆರನೆಯ ವಯಸ್ಸಿನ ವರೆಗಿನ ಮಕ್ಕಳಿಗೆ ಸರ್ಕಾರವು ಪೂರ್ವ-ಪ್ರಾಥಮಿಕ ಶಿಕ್ಷಣ ಕೊಡಲು ಅಗತ್ಯವಾದ ವ್ಯವಸ್ಥೆಗಳನ್ನು ಒದಗಿಸಬಹುದಾಗಿದೆ.

## ಅಧ್ಯಾಯ IV

## ಶಾಲೆ ಮತ್ತು ಶಿಕ್ಷಕರ ಜವಾಬ್ದಾರಿಗಳು

(ಉಚಿತ ಮತ್ತು ಕಡ್ಡಾಯ ಶಿಕ್ಷಣದಲ್ಲಿ ಶಾಲೆಗಳ ಜವಾಬ್ದಾರಿಯ ವ್ಯಾಪ್ತಿ) (ಬಲ ಮಾರ್ಜಿನ್ನಿನಲ್ಲಿದೆ)

**12. (1) ಈ ಕಾಯಿದೆಯ ಉದ್ದೇಶಗಳಿಗಾಗಿ ಶಾಲೆಯು,-**

(ಎ) ಪರಿಚ್ಛೇದ 2ರ ಕಲಂ (ಎನ್)ನ ಉಪಕಲಂ (i) ನಲ್ಲಿ ಸೂಚಿಸಿದಂತೆ ಶಾಲೆಯಲ್ಲಿ ಪ್ರವೇಶಾತಿ ಹೊಂದಿದ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕು;

(ಬಿ) ಪರಿಚ್ಛೇದ 2ರ ಕಲಂ (ಎನ್)ನ ಉಪಕಲಂ (ii) ನಲ್ಲಿ ಸೂಚಿಸಿದಂತೆ ಕನಿಷ್ಠ ಶೇಕಡಾ ಇಪ್ಪತ್ತೈದರಷ್ಟಕ್ಕೆ ಒಳ ಪಡಿಸಿದಂತೆ ಶಾಲೆ ಸ್ವೀಕರಿಸಿದ ವಾರ್ಷಿಕ ಆವರ್ತನ ಸಹಾಯಧನ ಅಥವಾ ಅನುದಾನ ತಾಳುವಷ್ಟು, ಶಾಲೆಯಲ್ಲಿ ಪ್ರವೇಶಾತಿ ಹೊಂದಿದ ಪ್ರಮಾಣದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸಬೇಕು;

(ಸಿ) ಪರಿಚ್ಛೇದ 2ರ ಕಲಂ (ಎನ್)ನ ಉಪಕಲಂ (iii) ಮತ್ತು (iv) ಗಳಲ್ಲಿ ಸೂಚಿಸಿದಂತೆ, ಮೊದಲ ತರಗತಿಯಲ್ಲಿ ತರಗತಿಯ ಸಂಖ್ಯಾಬಲದ ಕನಿಷ್ಠ ಶೇಕಡಾ ಇಪ್ಪತ್ತೈದರಷ್ಟು ನೆರೆ ಹೊರೆಯಲ್ಲಿರುವ ದುರ್ಬಲ ಮತ್ತು ಅನನುಕೂಲವುಳ್ಳ ಗುಂಪುಗಳ ಮಕ್ಕಳಿಗೆ ಪ್ರವೇಶಾತಿ ನೀಡಿ ಕಲಿಕೆ ಪೂರ್ತಿಗೊಳ್ಳುವವರೆಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀಡುವುದು:

*********************************************************************************



================================================================

ಹಾಗೆ ನೀಡಿದ ಪಕ್ಷದಲ್ಲಿ, ಮುಂದುವರೆದಂತೆ, ಪರಿಚ್ಛೇದ 2 ರ ಕಲಂ (ಎನ್) ಸೂಚಿಸಿದಂತೆ ಪೂರ್ವ-ಪ್ರಾಥಮಿಕ ಶಿಕ್ಷಣ ನೀಡುವ ಶಾಲೆ ಎಲ್ಲಿದೆಯೋ ಅಲ್ಲಿ ಕಲಂ (ಎ) ಯಿಂದ ಕಲಂ (ಸಿ) ಯ ವರೆಗಿನ ನಿಬಂಧನೆಗಳು ಪೂರ್ವ-ಪ್ರಾಥಮಿಕ ಶಾಲಾ ಶಿಕ್ಷಣಕ್ಕೆ ಅನ್ವಯವಾಗುತ್ತವೆ.

(2) ಉಪವಿಭಾಗ (ಎಲ್) ನ ಖಂಡಿಕೆ (ಸಿ) ಯಲ್ಲಿ ನಿಗದಿಪಡಿಸಿದಂತೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ನೀಡುತ್ತಿರುವ ಪರಿಚ್ಛೇದ 2 ರ ಕಲಂ (ಎನ್)ನ ಉಪಕಲಂ (iv)ನಲ್ಲಿ

ಸೂಚಿಸಿದ ಶಾಲೆಯು ಅದು ಭರಿಸಿದ ವೆಚ್ಚಗಳನ್ನು, ಅದು ಪ್ರತಿ ಮಗುವಿನ ಮೇಲೆ ಮಾಡಿದ ವೆಚ್ಚಕ್ಕೆ ಸಮಾನವಾಗಿ, ಅಥವಾ ಮಗುವಿನಿಂದ ಪಡೆದ ಮೊತ್ತಕ್ಕೆ ಸಮಾನವಾಗಿ, ಇವುಗಳಲ್ಲಿ ಯಾವುದು ಕನಿಷ್ಠವೋ ಅದರಂತೆ ಆ ಮೊತ್ತವನ್ನು ರಾಜ್ಯ ಸರಕಾರವು ತುಂಬಿಕೊಡುವುದು.

ಹಾಗೆ ತುಂಬಿಕೊಟ್ಟಲ್ಲಿ, ಆ ಮೊತ್ತವು ಪರಿಚ್ಛೇದ 2ರ ಕಲಂ (ಎನ್)ನ ಉಪಕಲಂ (i)ರಲ್ಲಿ ನಿಗದಿ ಗೊಳಿಸಿದ, ಶಾಲೆ ಪ್ರತಿ ಮಗುವಿನ ಮೇಲೆ ಮಾಡಿದ ವೆಚ್ಚವನ್ನು ಮೀರಬಾರದು;

ಹಾಗೆ ತುಂಬಿಕೊಟ್ಟಲ್ಲಿ, ಶಾಲೆಯು ಭೂಮಿ, ಕಟ್ಟಡ, ಉಪಕರಣಗಳು ಅಥವಾ ಬೇರೆ ಅನುಕೂಲಗಳನ್ನು ಉಚಿತವಾಗಿ ಅಥವಾ ಕಡಿಮೆ ಬೆಲೆಯಲ್ಲಿ ಪಡೆದುಕೊಂಡು ಆಭಾರಿಯಾಗಿದ್ದರೆ ಆ ಕಾರಣದಿಂದ ಅಂತಹ ಶಾಲೆಗಳು ತಮ್ಮ ಬಾಧ್ಯತೆಯ ಮೇರೆಯಲ್ಲಿ ವೆಚ್ಚವನ್ನು ಹಿಂದೆ ಪಡೆಯುವ ಅಧಿಕಾರ ಹೊಂದಿರುವುದಿಲ್ಲ.

(ಪ್ರವೇಶಾತಿಗೆ ಬಂಡವಾಳ ಶುಲ್ಕ ಮತ್ತು ಪ್ರವೇಶ ಪರೀಕ್ಷೆ ಇರುವುದಿಲ್ಲ) (ಎಡ ಮಾರ್ಜಿನ್ನಿನಲ್ಲಿದೆ)

(3) ಪ್ರತಿ ಶಾಲೆ ಸಮುಚಿತ ಸರ್ಕಾರ ಅಥವಾ ಸ್ಥಳಿಯ ಪ್ರಾಧಿಕಾರ ಬಯಸುವ ಮಾಹಿತಿಗಳನ್ನು ಆಯಾ ಸಂಸ್ಥೆಗೆ ಒದಗಿಸಬೇಕು.

13.(1) ಯಾವುದೇ ಶಾಲೆ ಅಥವಾ ವ್ಯಕ್ತಿ ಮಗುವನ್ನು ಶಾಲೆಗೆ ಸೇರಿಸಿಕೊಳ್ಳುವಾಗ ಯಾವುದೇ ಬಂಡವಾಳ ಶುಲ್ಕ ಸಂಗ್ರಹಿಸಕೂಡದು ಮತ್ತು ಮಗುವನ್ನು ಅಥವಾ ಮಗುವಿನ ಪಾಲಕರು ಅಥವಾ ಪೋಷಕರನ್ನು ಪ್ರವೇಶ ಪರೀಕ್ಷೆಗೆ ಒಡ್ಡಬಾರದು.

(2) ಉಪ ಪರಿಚ್ಛೇದ (1)ನ್ನು ಉಲ್ಲಂಘಿಸಿದ ಯಾವುದೇ ಶಾಲೆ ಅಥವಾ ವ್ಯಕ್ತಿ,--

(ಎ) ಬಂಡವಾಳ ಶುಲ್ಕ ತೆಗೆದುಕೊಂಡಲ್ಲಿ ವಿಧಿಸಿದ ಬಂಡವಾಳ ಶುಲ್ಕದ ಹತ್ತು ಪಟ್ಟು ವಿಸ್ತರಿಸಬಹುದಾದ ದಂಡದ ಶಿಕ್ಷೆಗೆ ಅರ್ಹನಾಗುವನು;

(ಬಿ) ಮಗುವನ್ನು ಪ್ರವೇಶ ಪರೀಕ್ಷೆಗಳಿಗೆ ಒಡ್ಡುವವರು, ಮೊದಲ ಉಲ್ಲಂಘನೆಗೆ ಇಪ್ಪತ್ತೈದು ಸಾವಿರ ರೂಪಾಯಿ ಮತ್ತು ತರುವಾಯದ ಪ್ರತಿ ಉಲ್ಲಂಘನೆಗೆ ಐವತ್ತು ಸಾವಿರ ರುಪಾಯಿಗಳ ದಂಡಕ್ಕೆ ಬಾಧ್ಯರಾಗುವರು.

(ಪ್ರವೇಶಾತಿಗೆ ವಯಸ್ಸಿನ ಪ್ರಮಾಣ) (ಎಡ ಮಾರ್ಜಿನ್ನಿನಲ್ಲಿದೆ)

14.(1) ಪ್ರಾಥಮಿಕ ಶಾಲಾ ಪ್ರವೇಶಾತಿಯ ಉದ್ದೇಶಗಳಿಗಾಗಿ ಮಗುವಿನ ವಯಸ್ಸು, 1886ರ ಜನನ,ಮರಣ,ಮತ್ತು ವಿವಾಹ ನೋಂದಣಿಯ ಕಾಯ್ದೆಯಲ್ಲಿರುವ ನಿಬಂಧನೆಗಳ ಪ್ರಕಾರ ನೀಡಲಾದ ಜನನ ಪ್ರಮಾಣ ಪತ್ರದ ಆಧಾರದಲ್ಲಿ ಅಥವಾ ನಿಗದಿ ಪಡಿಸಿದ ಇನ್ನಿತರ ದಾಖಲಾತಿಗಳ ಆಧಾರದಲ್ಲಿ ನಿರ್ಧರಿಸಲಾಗುತ್ತದೆ.

(2) ವಯಸ್ಸಿನ ಪ್ರಮಾಣ ಪತ್ರದ ಕೊರತೆಯ ಕಾರಣಕ್ಕಾಗಿ ಯಾವುದೇ ಮಗುವಿಗೆ ಶಾಲಾ ಪ್ರವೇಶವನ್ನು ನಿರಾಕರಿಸಲಾಗದು. 1886 ರ 6(ಬಲ ಮಾರ್ಜಿನ್)

(ಪ್ರವೇಶಾತಿಯ ನಿರಾಕರಣೆ ಇಲ್ಲ) ( ಎಡ ಮಾರ್ಜಿನ್ನಿನಲ್ಲಿದೆ)

15. ಮಗುವಿಗೆ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಅಥವಾ ನಿಗದಿ ಪಡಿಸಿದ ವಿಸ್ತೃತ ಅವಧಿಯೊಳಗೆ ಶಾಲೆಗೆ ಪ್ರವೇಶ ನೀಡಬೇಕು.

ಹಾಗೆ ನೀಡಿದ ಪಕ್ಷದಲ್ಲಿ, ವಿಸ್ತೃತ ಅವಧಿಯ ನಂತರವೂ ಪ್ರವೇಶಾತಿ ಬಯಸುವ ಯಾವುದೇ ಮಗುವಿಗೆ ಪ್ರವೇಶಾತಿ ನಿರಾಕರಿಸತಕ್ಕದ್ದಲ್ಲ.

ಹಾಗೆ ನೀಡಿದ ಪಕ್ಷದಲ್ಲಿ, ವಿಸ್ತೃತ ಅವಧಿಯ ನಂತರ ಪ್ರವೇಶಾತಿ ಹೊಂದಿದ ಮಗು ಸಮುಚಿತ ಸರ್ಕಾರ ನಿಗದಿಗೊಳಿಸುವ ಕ್ರಮದಲ್ಲಿ ಅಧ್ಯಯನ ಪೂರ್ತಿಗೊಳಿಸಬೇಕು.

(ಅನುತ್ತೀರ್ಣ ಮತ್ತು ವಜಾ ನಿಷೇಧ)

(ಎಡ ಮಾರ್ಜಿನ್ನಿನಲ್ಲಿದೆ)

16. ಪ್ರವೇಶಾತಿ ಹೊಂದಿದ ಯಾವುದೇ ಮಗುವನ್ನು ಪ್ರಾಥಮಿಕ ಶಿಕ್ಷಣ ಮುಗಿಯುವ ವರೆಗೆ, ಯಾವುದೇ ತರಗತಿಯಲ್ಲಿ ಅನುತ್ತೀರ್ಣಗೊಳಿಸತಕ್ಕದ್ದಲ್ಲ ಹಾಗೂ ವಜಾ ಮಾಡತಕ್ಕದ್ದಲ್ಲ.

(ಮಗುವಿಗೆ ನೀಡಲಾಗುವ ಶಾರೀರಿಕ ಶಿಕ್ಷೆ ಮತ್ತು ಮಾನಸಿಕ ಪೀಡನೆಗಳ ನಿಷೇಧ) (ಎಡ ಮಾರ್ಜಿನ್ನಿನಲ್ಲಿದೆ)

17.(1) ಯಾವುದೇ ಮಗುವನ್ನೂ ಶಾರೀರಿಕ ಶಿಕ್ಷೆ ಅಥವಾ ಮಾನಸಿಕ ಪೀಡನೆಗೆ ಒಳಪಡಿಸತಕ್ಕದ್ದಲ್ಲ.

(2) ಉಪ ಪರಿಚ್ಛೇದ (1)ರ ನಿಬಂಧನೆಯನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿ ಆ ವ್ಯಕ್ತಿಗೆ ಅನ್ವಯವಾಗುವ ಸೇವಾ ನಿಯಮಗಳ ಅಡಿಯಲ್ಲಿ ಶಿಸ್ತುಕ್ರಮಕ್ಕೆ ಅರ್ಹನಾಗುವನು.

(ಮಾನ್ಯತೆ ಪಡೆಯದೆ ಯಾವುದೇ ಶಾಲೆಯನ್ನು ಸ್ಥಾಪಿಸುವಂತಿಲ್ಲ) (ಎಡ ಮಾರ್ಜಿನ್ನಿನಲ್ಲಿದೆ)

18.(1) ~~ಈ~~ ಕಾಯಿದೆ ಜಾರಿಯಾದ ನಂತರ, ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಸ್ಥಾಪಿಸಿದ, ಒಡೆತನ ಹೊಂದಿದ, ನಿಯಂತ್ರಿಸುತ್ತಿರುವ ಶಾಲೆಗಳನ್ನು ಹೊರತು ಪಡಿಸಿ, ಯಾವುದೇ ಶಾಲೆಯನ್ನು ನಿಗದಿತ ನಮೂನೆ ಮತ್ತು ಕ್ರಮಗಳಲ್ಲಿ ಸಕ್ಷಮ ಪ್ರಾಧಿಕಾರಗಳಿಗೆ ಅರ್ಜಿ ಸಲ್ಲಿಸಿ ಮಾನ್ಯತಾ ಪ್ರಮಾಣ ಪತ್ರವನ್ನು ಪಡೆಯದೆ ಸ್ಥಾಪಿಸುವುದಾಗಲಿ ಕಾರ್ಯಾಚರಿಸುವುದಾಗಲಿ ಮಾಡತಕ್ಕದ್ದಲ್ಲ.

(2) ಉಪ ಪರಿಚ್ಛೇದ (1)ರಲ್ಲಿ ನಿಗದಿ ಪಡಿಸಿದ ಪ್ರಾಧಿಕಾರವು, ನಿಗದಿ ಗೊಳಿಸಿದಂತಹ ನಮೂನೆಗಳಲ್ಲಿ, ನಿಗದಿತ ಕ್ರಮದಲ್ಲಿ, ನಿಗದಿತ ಅವಧಿಯಲ್ಲಿ, ಹಾಗೂ ನಿಗದಿತ ಷರತ್ತುಗಳಿಗೆ ಅನುಸಾರವಾಗಿ ಮಾನ್ಯತಾ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

888888888888888888888888888888888888888888888888888888888888888

ಹಾಗೆ ನೀಡಿದ ಪಕ್ಷದಲ್ಲಿ, ಪರಿಚ್ಛೇದ 19ರ ಅಡಿಯಲ್ಲಿ ನಿಗದಿಗೊಳಿಸಲಾದ ನಿಯಮಗಳನ್ನೂ ಮಾನದಂಡಗಳನ್ನೂ ಪೂರೈಸದಿರುವ ಯಾವ ಶಾಲೆಗೂ ಮಾನ್ಯತೆಯನ್ನು ನೀಡತಕ್ಕದ್ದಲ್ಲ.

(3) ಮಾನ್ಯತೆಯ ನಿಯಮಗಳನ್ನು ಉಲ್ಲಂಘಿಸಿದ ಪಕ್ಷದಲ್ಲಿ, ನಿಗದಿತ ಪ್ರಾಧಿಕಾರವು, ಲಿಖಿತ ಆದೇಶದ ಮೂಲಕ ಮಾನ್ಯತೆಯನ್ನು ಹಿಂಪಡೆಯತಕ್ಕದ್ದು;

ಹಾಗೆ ಹಿಂಪಡೆದ ಪಕ್ಷದಲ್ಲಿ, ಅಂತಹ ಆದೇಶವು, ಅಮಾನ್ಯಗೊಂಡ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳು ನೆರೆ ಹೊರೆಯಲ್ಲಿರುವ ಬೇರೆ ಯಾವ ಶಾಲೆಯಲ್ಲಿ ಪ್ರವೇಶಾತಿ ಹೊಂದಬೇಕು ಎನ್ನುವ ಬಗೆಗೆ ನಿರ್ದೇಶನವನ್ನು ಒಳ ಗೊಂಡಿರತಕ್ಕದ್ದು;

ಹಾಗೆ ಹಿಂಪಡೆದ ಪಕ್ಷದಲ್ಲಿ, ಅಂತಹ ಶಾಲೆಗೆ ತನ್ನ ಅಹವಾಲನ್ನು, ನಿಗದಿತ ವಿಧಾನದಲ್ಲಿ ಮಂಡಿಸುವ ಅವಕಾಶವನ್ನು ನೀಡದೆ ಮಾನ್ಯತೆಯನ್ನು ಹಿಂಪಡೆಯತಕ್ಕದ್ದಲ್ಲ.

(4) ಉಪ ಪರಿಚ್ಛೇದ (3)ರ ಅಡಿಯಲ್ಲಿ ಮಾನ್ಯತೆಯನ್ನು ಹಿಂಪಡೆದ ದಿನಾಂಕದಿಂದ ಅಂತಹ ಶಾಲೆಯು ಕಾರ್ಯನಿರ್ವಹಿಸುವುದನ್ನು ಮುಂದುವರೆಸತಕ್ಕದ್ದಲ್ಲ.

(5) ಮಾನ್ಯತಾ ಪ್ರಮಾಣ ಪತ್ರ ಪಡೆಯದೆ ಶಾಲೆಯನ್ನು ಸ್ಥಾಪಿಸುವ ಅಥವಾ ನಡೆಸುವ ಅಥವಾ ಮಾನ್ಯತೆಯನ್ನು ಹಿಂಪಡೆದ ಮೇಲೂ ನಡೆಸುವುದನ್ನು ಮುಂದುವರೆಸುವ ಯಾವುದೇ ವ್ಯಕ್ತಿ, ಒಂದು ಲಕ್ಷ ರೂಪಾಯಿಗಳ ವರೆಗೆ ವಿಸ್ತೃತವಾಗುವ ದಂಡಕ್ಕೆ ಮತ್ತು ಉಲ್ಲಂಘನೆಯನ್ನು ಮುಂದುವರೆಸಿದಲ್ಲಿ ಉಲ್ಲಂಘನೆ ಮುಂದುವರೆದ ಪ್ರತಿ ದಿನವೊಂದಕ್ಕೆ ಹತ್ತು ಸಾವಿರ ರೂಪಾಯಿಗಳಷ್ಟು ದಂಡಕ್ಕೆ ಬಾಧ್ಯಸ್ಥನಾಗುತ್ತಾನೆ.

(ಶಾಲೆಯ ಮಾನದಂಡಗಳು ಮತ್ತು ಸಂಪ್ರದಾಯಗಳು) (ಬಲ ಮಾರ್ಜಿನ್ನಿನಲ್ಲಿದೆ)

19. (1) ಪರಿಚ್ಛೇದ 18 ರ ಅಡಿಯಲ್ಲಿ, ಪರಿಶಿಷ್ಟದಲ್ಲಿ ನಿಗದಿಗೊಳಿಸಿದ ನಿಯಮಗಳು ಮತ್ತು ಮಾನದಂಡಗಳನ್ನು ಪೂರೈಸದಿರುವ ಯಾವುದೇ ಶಾಲೆಯನ್ನು ಸ್ಥಾಪಿಸತಕ್ಕದ್ದಲ್ಲ ಮತ್ತು ಮಾನ್ಯತೆ ನೀಡತಕ್ಕದ್ದಲ್ಲ.

(2) ಈ ಕಾಯಿದೆ ಜಾರಿಯಾಗುವ ಮೊದಲೇ ಸ್ಥಾಪಿಸಲಾದ ಶಾಲೆಯು ಪರಿಶಿಷ್ಟದಲ್ಲಿ ನಿಗದಿಗೊಳಿಸಿದ ನಿಯಮಗಳು ಮತ್ತು ಮಾನದಂಡಗಳನ್ನು ಪೂರೈಸದಿದ್ದರೆ, ಜಾರಿಗೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯಲ್ಲಿ, ಅದು ತನ್ನದೇ ವೆಚ್ಚದಲ್ಲಿ, ನಿಯಮಗಳು ಮತ್ತು ಮಾನದಂಡಗಳನ್ನು ಪೂರೈಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(3) ಯಾವುದೇ ಶಾಲೆಯು ಉಪ ಪರಿಚ್ಛೇದ (2)ರ ಅಡಿಯಲ್ಲಿ ನಿಗದಿಗೊಳಿಸಿದ ಅವಧಿಯಲ್ಲಿ ನಿಯಮ ಮತ್ತು ಮಾನದಂಡಗಳನ್ನು ಪೂರೈಸಲು ವಿಫಲವಾದಲ್ಲಿ ಪರಿಚ್ಛೇದ 18ರ ಉಪ ಪರಿಚ್ಛೇದ (1)ರಲ್ಲಿ ನಿಗದಿತವಾದ ಪ್ರಾಧಿಕಾರವು ಅದೇ ಉಪ ಪರಿಚ್ಛೇದ (3)ರಲ್ಲಿ ನಿಗದಿಪಡಿಸಿದ ಕ್ರಮದಲ್ಲಿ, ಆ ಶಾಲೆಗೆ ನೀಡಿದ್ದ ಮಾನ್ಯತೆಯನ್ನು ಹಿಂಪಡೆಯತಕ್ಕದ್ದು.

(4) ಉಪ ಪರಿಚ್ಛೇದ (3) ರ ಅಡಿಯಲ್ಲಿ ಮಾನ್ಯತೆ ಹಿಂಪಡೆಯಲಾದ ದಿನದಿಂದ ಜಾರಿಗೆ ಬರುವಂತೆ ಶಾಲೆ ಕಾರ್ಯಾಚರಣೆಯನ್ನು ನಿಲ್ಲಿಸತಕ್ಕದ್ದು.

(5) ಶಾಲೆಯ ಮಾನ್ಯತೆಯನ್ನು ಹಿಂಪಡೆದ ಮೇಲೂ ಕಾರ್ಯಾಚರಣೆ ನಡೆಸುವುದನ್ನು ಮುಂದುವರೆಸುವ ಯಾವುದೇ ವ್ಯಕ್ತಿ, ಒಂದು ಲಕ್ಷ ರೂಪಾಯಿಗಳ ವರೆಗೆ ವಿಸ್ತೃತವಾಗುವ

ದಂಡಕ್ಕೆ ಮತ್ತು ಉಲ್ಲಂಘನೆಯನ್ನು ಮುಂದುವರೆಸಿದಲ್ಲಿ ಉಲ್ಲಂಘನೆ ಮುಂದುವರೆದ ಪ್ರತಿ ದಿನವೊಂದಕ್ಕೆ ಹತ್ತು ಸಾವಿರ ರೂಪಾಯಿಗಳಷ್ಟು ದಂಡಕ್ಕೆ ಬಾಧ್ಯಸ್ಥನಾಗುತ್ತಾನೆ.

(ಪರಿಶಿಷ್ಟ ತಿದ್ದುಪಡಿ ಮಾಡುವ ಅಧಿಕಾರ) (ಬಲ ಮಾರ್ಜಿನ್ನಿನಲ್ಲಿದೆ)

20. ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಯಾವುದಾದರೂ ನಿಯಮವನ್ನು ಅಥವಾ ಮಾನದಂಡವನ್ನು ಸೇರಿಸುವುದು, ಅಥವಾ ತೆಗೆಯುವುದರ ಮೂಲಕ ಪರಿಶಿಷ್ಟವನ್ನು ತಿದ್ದುಪಡಿ ಮಾಡಬಹುದು.

(ಶಾಲಾ ನಿರ್ವಹಣಾ ಸಮಿತಿ) (ಬಲ ಮಾರ್ಜಿನ್ನಿನಲ್ಲಿದೆ)

21. (1) ಪರಿಚ್ಛೇದ 2 ರ ಕಲಂ (ಎನ್)ನ ಉಪಕಲಂ (iv) ರಲ್ಲಿ ನಿರ್ದಿಷ್ಟಪಡಿಸಿದ ಶಾಲೆಗಳನ್ನು ಹೊರತುಪಡಿಸಿ ಬೇರೆ ಶಾಲೆಯು ಸ್ಥಳೀಯ ಪ್ರಾಧಿಕಾರದ ಚುನಾಯಿತ ಪ್ರತಿನಿಧಿ, ಶಾಲೆಗೆ ಪ್ರವೇಶ ಹೊಂದಿದ ಮಕ್ಕಳ ಪಾಲಕರು ಅಥವಾ ಪೋಷಕರು ಮತ್ತು ಶಿಕ್ಷಕರನ್ನು ಒಳಗೊಂಡ ಶಾಲಾ ನಿರ್ವಹಣಾ ಸಮಿತಿಯನ್ನು ರಚಿಸತಕ್ಕದ್ದು.

ಹಾಗೆ ರಚಿಸಿದ ಪಕ್ಷದಲ್ಲಿ, ಸಮಿತಿಯ ಕನಿಷ್ಠ ನಾಲರಲ್ಲಿ ಮೂರರಷ್ಟು ಸದಸ್ಯರು ಪಾಲಕರು ಅಥವಾ ಪೋಷಕರಾಗಿರತಕ್ಕದ್ದು;

ಹಾಗೆ ರಚಿಸಿದ ಪಕ್ಷದಲ್ಲಿ, ಅನನುಕೂಲವುಳ್ಳ ಮಕ್ಕಳು ಮತ್ತು ದುರ್ಬಲ ಗುಂಪಿಗೆ ಸೇರಿದ ಮಕ್ಕಳ ಪಾಲಕರು/ಪೋಷಕರಿಗೆ ಪ್ರಮಾಣ ಬದ್ಧವಾದ ಪ್ರಾತಿನಿಧ್ಯ ನೀಡತಕ್ಕದ್ದು.

ಹಾಗೆ ರಚಿಸಿದ ಪಕ್ಷದಲ್ಲಿ, ಅಂತಹ ಸಮಿತಿಯ ಶೇಕಡಾ ಐವತ್ತರಷ್ಟು ಸದಸ್ಯರು ಮಹಿಳೆಯರಾಗಿರತಕ್ಕದ್ದು.

(2) ಶಾಲಾ ನಿರ್ವಹಣಾ ಸಮಿತಿಯು ಕೆಳಗಿನ ಕಾರ್ಯಗಳನ್ನು ನಿರ್ವಹಿಸುವುದು,

ಅವುಗಳೆಂದರೆ:--

(ಎ) ಶಾಲೆಯ ಕೆಲಸಗಳ ಬಗೆಗೆ ನಿಗಾ ವಹಿಸುವುದು;

(ಬಿ) ಶಾಲೆಯ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿ ಶಿಫಾರಸು ಮಾಡುವುದು;

(ಸಿ) ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಬೇರೆ ಮೂಲಗಳಿಂದ ಸ್ವೀಕರಿಸಿದ ನಿಧಿಯ ಉಪಯೋಗದ ಮೇಲೆ ನಿಗಾ ವಹಿಸುವುದು; ಮತ್ತು

(ಡಿ) ನಿಗದಿ ಗೊಳಿಸ ಬಹುದಾದ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

(ಶಾಲಾ ಅಭಿವೃದ್ಧಿ ಯೋಜನೆ) ( ಬಲ ಮಾರ್ಜಿನ್ನಿನಲ್ಲಿದೆ)

22. (1) ಪರಿಚ್ಛೇದ 21 ರ ಉಪ ಪರಿಚ್ಛೇದ(1)ರ ಅಡಿಯಲ್ಲಿ ರಚಿಸಲಾದ, ಪ್ರತಿ ಶಾಲಾ ನಿರ್ವಹಣಾ ಸಮಿತಿಯು,

ನಿಗದಿಗೊಳಿಸಿದ ಕ್ರಮದಲ್ಲಿ ಶಾಲಾ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು.

(2) ಹೀಗೆ ಉಪಪರಿಚ್ಛೇದ (1) ರ ಅಡಿಯಲ್ಲಿ ಸಿದ್ಧಪಡಿಸಿದ ಶಾಲಾ ಅಭಿವೃದ್ಧಿ ಯೋಜನೆಯೇ, ಸಂದರ್ಭಕ್ಕನುಸಾರವಾಗಿ ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಕೈಗೊಳ್ಳುವ ಯೋಜನೆಗಳು ಮತ್ತು ಧನಸಹಾಯಕ್ಕೆ ಆಧಾರವಾಗುತ್ತವೆ.

.................................................................................................................................



================================================================

---

(ನೇಮಕಾತಿಗೆ ಅರ್ಹತೆಗಳು ಮತ್ತು ಶಿಕ್ಷಕರ ಸೇವಾ ನಿಯಮಗಳು ಮತ್ತು ನಿಬಂಧನೆಗಳು) (ಎಡ ಮಾರ್ಜಿನ್ನಿನಲ್ಲಿದೆ)

23. (1) ಕೇಂದ್ರ ಸರಕಾರದಿಂದ ಅಧಿಕಾರ ಪ್ರದತ್ತವಾದ ಶೈಕ್ಷಣಿಕ ಪ್ರಾಧಿಕಾರವು ಅಧಿಸೂಚನೆಯ ಮೂಲಕ ನಿಗದಿ ಪಡಿಸಿರುವಂತಹ ಕನಿಷ್ಠ ಅರ್ಹತೆಗಳನ್ನುಳ್ಳ ಯಾವುದೇ ವ್ಯಕ್ತಿ ಶಿಕ್ಷಕನಾಗಿ ನೇಮಕಾತಿಗೆ ಅರ್ಹನಾಗುವನು.

(2) ಯಾವುದಾದರೂ ರಾಜ್ಯ ಶಿಕ್ಷಕರಿಗೆ ತರಬೇತಿ ನೀಡುವ ಸಂಸ್ಥೆಗಳನ್ನು ಅಥವಾ ಅಧ್ಯಯನ ಪಥಗಳನ್ನು ಹೊಂದಿರದಿದ್ದರೆ ಅಥವಾ ಉಪ ಪರಿಚ್ಛೇದ(1) ರಲ್ಲಿ ನಿಗದಿ ಪಡಿಸಿದ ಕನಿಷ್ಠ ಅರ್ಹತೆ ಹೊಂದಿದ ಶಿಕ್ಷಕರ ಲಭ್ಯತೆಯನ್ನು ಹೊಂದಿರದಿದ್ದರೆ, ಕೇಂದ್ರ ಸರ್ಕಾರ ಅಗತ್ಯ ಎನಿಸಿದಲ್ಲಿ, ಅಧಿಸೂಚನೆಯ ಮೂಲಕ, ಶಿಕ್ಷಕರ ನೇಮಕಾತಿಗೆ ಬೇಕಾದ ಕನಿಷ್ಠ ಅರ್ಹತೆಗಳನ್ನು, ಐದು ವರ್ಷಕ್ಕೆ ಮೀರದಂತೆ ಸಡಿಲಗೊಳಿಸಬಹುದು;

ಹಾಗೆ ಸಡಿಲಗೊಳಿಸಿದ ಪಕ್ಷದಲ್ಲಿ, ಈ ಕಾಯಿದೆ ಜಾರಿಗೆ ಬಂದ ಕಾಲದಲ್ಲಿ ಉಪ ಪರಿಚ್ಛೇದ (1) ರಲ್ಲಿನ ಕನಿಷ್ಠ ಅರ್ಹತೆಗಳನ್ನು ಹೊಂದದಿರುವ ಶಿಕ್ಷಕರು ಅಂತಹ ಕನಿಷ್ಠ ಅರ್ಹತೆಯನ್ನು ಐದು ವರ್ಷದ ಒಳಗೆ ಗಳಿಸತಕ್ಕದ್ದು.

(3) ಶಿಕ್ಷಕರಿಗೆ ಪಾವತಿಸಬೇಕಾದ ವೇತನ ಮತ್ತು ಭತ್ಯೆಗಳು, ಮತ್ತು ಅವರ ಸೇವಾ ನಿಯಮಗಳು ಮತ್ತು ನಿಬಂಧನೆಗಳು ನಿಗದಿಗೊಳಿಸಿದಂತೆ ಇರುತ್ತವೆ.

(ಶಿಕ್ಷಕರ ಕರ್ತವ್ಯಗಳು ಮತ್ತು ಕುಂದು ಕೊರತೆಗಳ ನಿವಾರಣೆ) (ಎಡ ಮಾರ್ಜಿನ್ನಿನಲ್ಲಿದೆ)

24. (1) ಪರಿಚ್ಛೇದ 23ರ ಉಪ ಪರಿಚ್ಛೇದ (1)ರ ಅಡಿಯಲ್ಲಿ ನೇಮಕಾತಿ ಹೊಂದಿದ ಶಿಕ್ಷಕರು ಈ ಕೆಳಗಿನ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು:--

(ಎ) ಶಾಲೆಗೆ ಹಾಜರಾಗುವಲ್ಲಿ ಕ್ರಮ ಬದ್ಧತೆ ಮತ್ತು ಸಮಯಪಾಲನೆ.

(ಬಿ) ಪರಿಚ್ಛೇದ 29ರ ಉಪ ಪರಿಚ್ಛೇದ (2)ರಲ್ಲಿರುವ ನಿಬಂಧನೆಗಳ ಪ್ರಕಾರ ಪಠ್ಯಕ್ರಮದ ಸಂಪೂರ್ಣ ನಿರ್ವಹಣೆ.

(ಸಿ) ನಿಗದಿ ಪಡಿಸಿದ ಕಾಲಾವಧಿಯಲ್ಲಿ ಪೂರ್ಣ ಪಠ್ಯಕ್ರಮದ ಮುಕ್ತಾಯ.

(ಡಿ) ಪ್ರತಿ ಮಗುವಿನ ಕಲಿಕಾ ಸಾಮರ್ಥ್ಯವನ್ನು ಮೌಲ್ಯ ಮಾಪನ ಮಾಡುವುದು ಹಾಗೂ ಅಗತ್ಯಕ್ಕೆ ಅನುಗುಣವಾಗಿ ಹೆಚ್ಚುವರಿ ಬೋಧನೆ.

(ಇ) ಪಾಲಕರು ಮತ್ತು ಪೋಷಕರೊಡನೆ ನಿಯಮಿತವಾಗಿ ಸಭೆಗಳನ್ನು ನಡೆಸುವುದು, ಮಕ್ಕಳ ಹಾಜರಾತಿಯ ಕ್ರಮಬದ್ಧತೆ, ಕಲಿಕೆಯ ಸಾಮರ್ಥ್ಯ, ಕಲಿಕೆಯಲ್ಲಿ ಮಾಡಿದ ಪ್ರಗತಿ ಮತ್ತು ಇತರೆ ಬೇರೆ ಪ್ರಸ್ತುತ ಮಾಹಿತಿಗಳ ತಿಳುವಳಿಕೆ ನೀಡುವುದು.

(ಎಫ್) ನಿಗದಿಗೊಳಿಸಲಾಗುವ ಇತರ ಕರ್ತವ್ಯಗಳ ನಿರ್ವಹಣೆ.

(2) ಉಪ ಪರಿಚ್ಛೇದ (1)ರಲ್ಲಿ ನಿಗದಿ ಗೊಳಿಸಿದ ಕರ್ತವ್ಯಗಳನ್ನು ನಿರ್ವಹಿಸುವುದರಲ್ಲಿ ತಪ್ಪು ಎಸಗಿದ ಶಿಕ್ಷಕರು, ಆತನಿಗೆ ಅಥವಾ ಆಕೆಗೆ, ಅನ್ವಯವಾಗುವ ಸೇವಾ ನಿಯಮಗಳ ಅಡಿಯಲ್ಲಿ ಶಿಕ್ಷೆಗೆ ಅರ್ಹರಾಗುವರು:

ಹಾಗೆ ಶಿಕ್ಷೆಗೆ ಅರ್ಹರಾದ ಪಕ್ಷದಲ್ಲಿ, ಈ ರೀತಿಯ ಶಿಸ್ತುಕ್ರಮ ಕೈಗೊಳ್ಳುವ ಮೊದಲು ಸಮಂಜಸವಾಗಿ ಅಹವಾಲು ಮಂಡಿಸುವ ಅವಕಾಶವನ್ನು ಶಿಕ್ಷಕರಿಗೆ ಒದಗಿಸತಕ್ಕದ್ದು.

(3) ಶಿಕ್ಷಕರಿಗೆ ಕುಂದು ಕೊರತೆಗಳಿದ್ದಲ್ಲಿ ಅದನ್ನು ನಿಗದಿಗೊಳಿಸಿದಂತೆ ನಿವಾರಿಸತಕ್ಕದ್ದು.

( ಬೋಧಕ ವಿದ್ಯಾರ್ಥಿ ಅನುಪಾತ) (ಎಡ ಮಾರ್ಜಿನ್ನಿನಲ್ಲಿದೆ)

25. (1) ಈ ಅಧಿನಿಯಮ ಜಾರಿಯಾದ ದಿನಾಂಕದಿಂದ ಆರು ತಿಂಗಳಲ್ಲಿ, ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಪ್ರತಿ ಶಾಲೆಯಲ್ಲಿಯೂ ಬೋಧಕ-ವಿದ್ಯಾರ್ಥಿಗಳ ಅನುಪಾತವು ಪರಿಶಿಷ್ಟದಲ್ಲಿ ನಿಗದಿಗೊಳಿಸಿದಂತೆ ಇದೆಯೇ ಎನ್ನುವುದನ್ನು ಖಾತರಿಗೊಳಿಸಿಕೊಳ್ಳತಕ್ಕದ್ದು.

(2) ಉಪ ಪರಿಚ್ಛೇದ (1)ರ ಅಡಿಯಲ್ಲಿ ನಿಗದಿಪಡಿಸಲಾದ ಬೋಧಕ ವಿದ್ಯಾರ್ಥಿ ಅನುಪಾತವನ್ನು ನಿರ್ವಹಿಸುವ ಉದ್ದೇಶದಿಂದ, ಒಂದು ಶಾಲೆಗೆ ನಿಯೋಜಿಸಿದ ಶಿಕ್ಷಕರನ್ನು ಬೇರೊಂದು ಶಾಲೆ ಅಥವಾ ಕಛೇರಿಯಲ್ಲಿ ಸೇವೆ ಸಲ್ಲಿಸುವಂತೆ ಮಾಡುವುದಾಗಲಿ ಅಥವಾ ಪರಿಚ್ಛೇದ 27ರಲ್ಲಿ ನಿಗದಿಗೊಳಿಸಲಾದವುಗಳನ್ನು ಬಿಟ್ಟು ಬೇರೆ ಯಾವುದೇ ಶೈಕ್ಷಣಿಕವಲ್ಲದ ಉದ್ದೇಶಗಳಿಗಾಗಿ ನಿಯೋಜಿಸುವುದಾಗಲೀ ಸಲ್ಲದು.

(ಶಿಕ್ಷಕರ ಖಾಲಿ ಹುದ್ದೆಗಳನ್ನು ತುಂಬುವುದು) (ಎಡ ಮಾರ್ಜಿನ್ನಿನಲ್ಲಿದೆ)

26. ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ಸ್ಥಾಪಿಸಿದ, ಒಡೆತನ ಹೊಂದಿದ, ನಿಯಂತ್ರಣ ಹೊಂದಿದ, ಅಥವಾ ನೇರವಾಗಿ ಅಥವಾ ಪರೋಕ್ಷವಾಗಿ ಬಹು ಮಟ್ಟಿಗೆ ಆರ್ಥಿಕ ಸಹಾಯ ಒದಗಿಸಿದ, ಶಾಲೆಗೆ ಸಂಬಂಧಿಸಿದಂತೆ, ತನ್ನ ನಿಯಂತ್ರಣದಲ್ಲಿರುವ ಆ ಶಾಲೆಯಲ್ಲಿ, ಶಿಕ್ಷಕರ ಖಾಲಿ ಹುದ್ದೆಗಳು ಮಂಜೂರಾದ ಹುದ್ದೆಗಳ ಸಂಖ್ಯೆಯ ಶೇಕಡಾ ಹತ್ತನ್ನು ಮೀರಿಲ್ಲ ಎನ್ನುವುದನ್ನು ಖಚಿತ ಪಡಿಸಿಕೊಳ್ಳತಕ್ಕದ್ದು.

(ಶಿಕ್ಷಕರನ್ನು ಶೈಕ್ಷಣಿಕವಲ್ಲದ ಉದ್ದೇಶಗಳಿಗೆ ನಿಯೋಜಿಸುವುದಕ್ಕೆ ನಿಷೇಧ) (ಎಡ ಮಾರ್ಜಿನ್ನಿನಲ್ಲಿದೆ)

27. ಸಂದರ್ಭಕ್ಕನುಸಾರವಾಗಿ ರಾಜ್ಯ ವಿಧಾನಸಭೆ ಅಥವಾ ಲೋಕಸಭೆ, ಸ್ಥಳೀಯ ಪ್ರಾಧಿಕಾರಗಳಿಗೆ ಸಂಬಂಧಿಸಿದ ಚುನಾವಣೆಗಳು, ದಶವಾರ್ಷಿಕ ಜನಗಣತಿ, ವಿಪತ್ತು ಪರಿಹಾರ ಕಾರ್ಯಗಳನ್ನು ಹೊರತು ಪಡಿಸಿ ಬೇರೆ ಶೈಕ್ಷಣಿಕವಲ್ಲದ ಕಾರ್ಯಗಳಿಗೆ ಯಾವ ಶಿಕ್ಷಕನ/ಳನ್ನೂ ನಿಯೋಜಿಸತಕ್ಕದ್ದಲ್ಲ.

(ಶಿಕ್ಷಕರಿಂದ ಮನೆ ಪಾಠ ನಿಷೇಧ) ( ಎಡ ಮಾರ್ಜಿನ್ನಿನಲ್ಲಿದೆ)

28. ಯಾವುದೇ ಶಿಕ್ಷಕರು ಮನೆ ಪಾಠ ಅಥವಾ ಖಾಸಗಿ ಬೋಧನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳತಕ್ಕದ್ದಲ್ಲ.



## ಅಧ್ಯಾಯ V

## ಪಠ್ಯಕ್ರಮ ಮತ್ತು ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸುವಿಕೆ

(ಪಠ್ಯಕ್ರಮ ಮತ್ತು ಮೌಲ್ಯಮಾಪನ ವಿಧಾನ) (ಬಲ ಮಾರ್ಜಿನ್ನಿನಲ್ಲಿದೆ)

29. (1) ಸಮುಚಿತ ಸರ್ಕಾರ ಪ್ರಕಟಣೆಯ ಮೂಲಕ ನಿಗದಿಗೊಳಿಸುವ ಶೈಕ್ಷಣಿಕ ಪ್ರಾಧಿಕಾರವು ಪ್ರಾಥಮಿಕ ಶಾಲಾ ಪಠ್ಯಕ್ರಮ ಮತ್ತು ಮೌಲ್ಯಮಾಪನ ವಿಧಾನಗಳನ್ನು ನಿಗದಿಪಡಿಸತಕ್ಕದ್ದು..

(2) ಶೈಕ್ಷಣಿಕ ಪ್ರಾಧಿಕಾರವು ಉಪ ಪರಿಚ್ಛೇದ (1) ಅಡಿಯಲ್ಲಿ ಪಠ್ಯಕ್ರಮ ಮತ್ತು ಮೌಲ್ಯಮಾಪನ ವಿಧಾನಗಳನ್ನು ನಿಗದಿಪಡಿಸುವ ಸಂದರ್ಭದಲ್ಲಿ ಕೆಳಕಂಡ ವಿಷಯಗಳನ್ನು ಪರಿಶೀಲನೆಗೆ ತೆಗೆದುಕೊಳ್ಳತಕ್ಕದ್ದು. ಅವುಗಳೆಂದರೆ:-

(ಎ) ಸಂವಿಧಾನದಲ್ಲಿ ಸ್ಥಾಪಿತವಾದ ಮೌಲ್ಯಗಳಿಗೆ ಅನುಗುಣವಾಗಿರುವುದು;

(ಬಿ) ಮಗುವಿನ ಸರ್ವಾಂಗೀಣ ಅಭಿವೃದ್ಧಿ;

(ಸಿ) ಮಗುವಿನ ಜ್ಞಾನ, ಸಾಮರ್ಥ್ಯ ಮತ್ತು ಪರಿಣತಿಗಳ ನಿರ್ಮಾಣ;

(ಡಿ) ಪೂರ್ಣ ಪ್ರಮಾಣದಲ್ಲಿ ಶಾರೀರಿಕ ಮತ್ತು ಮಾನಸಿಕ ಸಾಮರ್ಥ್ಯಗಳ ಅಭಿವೃದ್ಧಿ:

(ಇ) ಶಿಶು ಸ್ನೇಹಿಯಾದ ಮತ್ತು ಶಿಶು ಕೇಂದ್ರಿತವಾದ ಕ್ರಮದಲ್ಲಿ ಚಟುವಟಿಕೆಗಳು, ಶೋಧ ಮತ್ತು ಅನ್ವೇಷಣೆಗಳ ಮೂಲಕ ಕಲಿಕೆ;

(ಎಫ್) ಬೋಧನೆಯು ಎಷ್ಟು ಸಾಧ್ಯವೊ ಅಷ್ಟು ಮಗುವಿನ ಮಾತೃಭಾಷಾ ಮಾಧ್ಯಮದಲಿ ಇರತಕ್ಕದ್ದು.

(ಜಿ) ಮಗುವನ್ನು ಭಯ, ಆಘಾತ, ಉದ್ವಿಗ್ನತೆಗಳಿಂದ ಮುಕ್ತಗೊಳಿಸಿ ಅದು ತನ್ನ ಅಭಿಪ್ರಾಯವನ್ನು ಮುಕ್ತವಾಗಿ ವ್ಯಕ್ತಪಡಿಸುವುದಕ್ಕೆ ಸಹಾಯ ಮಾಡುವುದು;

(ಎಚ್) ಮಗುವಿನ ಜ್ಞಾನದ ಗ್ರಹಿಕೆ ಮತ್ತು ಅದನ್ನು ಅನ್ವಯಿಸುವ ಅವನ ಅಥವಾ ಅವಳ ಸಾಮರ್ಥ್ಯಗಳನ್ನು ಸಮಗ್ರವಾಗಿ ಮತ್ತು ನಿರಂತರವಾಗಿ ಮೌಲ್ಯಮಾಪನ ಮಾಡುವುದು;

(ಪರೀಕ್ಷೆ ಮತ್ತು ಪೂರ್ಣತಾ ಪ್ರಮಾಣ ಪತ್ರ) ( ಬಲ ಮಾರ್ಜಿನ್ನಿನಲ್ಲಿದೆ)

30. (1) ಯಾವ ಮಗುವೂ ಪ್ರಾಥಮಿಕ ಶಿಕ್ಷಣ ಪೂರ್ಣವಾಗುವ ವರೆಗೂ ಯಾವುದೇ ಮಂಡಳಿಯ ಪರಿಕ್ಷೆಯಲ್ಲಿ ತೇರ್ಗಡೆ ಹೊಂದುವ ಅಗತ್ಯವಿಲ್ಲ.

(2) ಪ್ರಾಥಮಿಕ ಶಿಕ್ಷಣ ಪೂರೈಸುವ ಪ್ರತಿ ಮಗುವಿಗೂ ನಿಗದಿಪಡಿಸಿದ ನಮೂನೆ ಮತ್ತು ಕ್ರಮದಲ್ಲಿ ಪ್ರಮಾಣ ಪತ್ರ ನೀಡತಕ್ಕದ್ದು.

# ಅಧ್ಯಾಯ VI

# ಮಕ್ಕಳ ಹಕ್ಕುಗಳ ರಕ್ಷಣೆ

(ಮಕ್ಕಳ ಶಿಕ್ಷಣದ ಹಕ್ಕಿನ ನಿಗಾ ವಹಿಸುವುದು) (ಬಲ ಮಾರ್ಜಿನ್ನಿನಲ್ಲಿದೆ)

31. (1) 2005ರ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಾಯಿದೆ, ವಿಭಾಗ (3) ರ ಅಡಿಯಲ್ಲಿ ರಚಿತವಾದ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಅಥವಾ ಸಂದರ್ಭಾನುಸಾರವಾಗಿ ಅದೇ ಕಾಯಿದೆಯ ಪರಿಚ್ಛೇದ (17)ರ ಅಡಿಯಲ್ಲಿ ರಚಿತವಾದ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ರಾಷ್ಟ್ರೀಯ ಆಯೋಗವು, ಅದೇ ಕಾಯಿದೆಯ ಅಡಿಯಲ್ಲಿ ಅವುಗಳಿಗೆ ವಹಿಸಿದ ಕಾರ್ಯಗಳ ಜೊತೆ ಹೆಚ್ಚುವರಿಯಾಗಿ, ಈ ಕೆಳಗಿನ ಕಾರ್ಯಗಳನ್ನೂ ನಿರ್ವಹಿಸತಕ್ಕದ್ದು. ಅವುಗಳೆಂದರೆ:--

(2006 ರ 4) ( ಎಡ ಮಾರ್ಜಿನ್ನಿನಲ್ಲಿದೆ)

(ಎ) ಈ ಕಾಯಿದೆ ಅಥವಾ ಇದರಡಿಯಲ್ಲಿ ನೀಡಲಾದ ಹಕ್ಕುಗಳ ರಕ್ಷಣೆಗಳನ್ನು ಪರೀಕ್ಷಿಸುವುದು ಮತ್ತು ಪುನರ್ವಿಮರ್ಶಿಸುವುದು ಮತ್ತು ಪರಿಣಾಮಕಾರಿ ಜಾರಿಗಾಗಿ ಮಾರ್ಗಗಳನ್ನು ಶಿಫಾರಸು ಮಾಡುವುದು; ಮತ್ತು

(ಬಿ) ಮಗುವಿನ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಸಂಬAಧಿಸಿದ ದೂರುಗಳ ಬಗೆಗೆ ತನಿಖೆ ನಡೆಸುವುದು; ಮತ್ತು

(ಸಿ) ಸದರಿ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ವಿಧೇಯಕದ 15 ಮತ್ತು 24 ರ ಪರಿಚ್ಛೇದಗಳ ಅಡಿಯಲ್ಲಿ ತಿಳಿಸಲಾಗಿರುವಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.

(2) ಉಪ ಪರಿಚ್ಛೇದ (1) ಕಲಂ (ಸಿ) ಅಡಿಯಲ್ಲಿ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಬಗೆಗಿನ ಯಾವುದೇ ವಿಚಾರಣೆ ನಡೆಸುವ ಸಂದರ್ಭದಲ್ಲಿ ಸದರಿ ಆಯೋಗಗಳು ಮಕ್ಕಳ ಹಕ್ಕುಗಳ ರಕ್ಷಣಾ ಕಾಯಿದೆಯ ಪರಿಚ್ಛೇದ 14 ಮತ್ತು 24 ರಲ್ಲಿ ಕ್ರಮವಾಗಿ ಗೊತ್ತು ಪಡಿಸಿದ ಅಧಿಕಾರಗಳನ್ನೇ ಹೊಂದಿರುತ್ತವೆ.

(3) ರಾಜ್ಯ ಮಕ್ಕಳ ಹಕ್ಕು ರಕ್ಷಣಾ ಆಯೋಗ ರಚನೆ ಆಗಿರದ ರಾಜ್ಯದಲ್ಲಿ, ಸಮುಚಿತ ಸರ್ಕಾರ ಉಪ ಪರಿಚ್ಛೇದ (1) ರ ಕಲಂ (ಎ) ಯಿಂದ (ಸಿ) ಯ ವರೆಗೆ ನಿಗದಿಗೊಳಿಸಿದ ಕಾರ್ಯಗಳನ್ನು ನಿರ್ವಹಿಸುವ ಉದ್ದೇಶಗಳಿಗೆ ನಿಗದಿಪಡಿಸಬಹುದಾದ ನಿಯಮ ನಿಬಂಧನೆಗಳ ಪ್ರಕಾರ ಮತ್ತು ಕ್ರಮದಲ್ಲಿ ಪ್ರಾಧಿಕಾರವೊಂದನ್ನು ರಚಿಸಬಹುದು.

(ಕುಂದು ಕೊರತೆಗಳ ನಿವಾರಣೆ) ( ಬಲ ಮಾರ್ಜಿನ್ನಿನಲ್ಲಿದೆ)

32. (1) ಪರಿಚ್ಛೇದ 31 ಇರಬಹುದಾದ ಯಾವುದನ್ನೂ ಪರಿಗಣಿಸದೆ, ಈ ಕಾಯಿದೆಯ ಅಡಿಯಲ್ಲಿ ಮಗುವಿನ ಹಕ್ಕಿಗೆ ಸಂಬಂಧಿಸಿ ಯಾವುದೇ ವ್ಯಕ್ತಿಗೆ ಯಾವುದೇ ಅಹವಾಲುಗಳಿದ್ದಲ್ಲಿ ಅವರು ಅಧಿಕಾರ ವ್ಯಾಪ್ತಿಯುಳ್ಳ ಸ್ಥಳೀಯ ಪ್ರಾಧಿಕಾರಕ್ಕೆ ಲಿಖಿತ ದೂರನ್ನು ಸಲ್ಲಿಸುವುದು.

(2) ಉಪ ಪರಿಚ್ಛೇದ (1) ರ ಅಡಿಯಲ್ಲಿ ದೂರು ಸ್ವೀಕರಿಸುವ ಸ್ಥಳೀಯ ಪ್ರಾಧಿಕಾರ, ಸಂಬಂಧ ಪಟ್ಟ ಪಕ್ಷಗಳಿಗೆ ಅಹವಾಲು ಮಂಡಿಸಲು ಬೇಕಾದ ನ್ಯಾಯಸಮ್ಮತ ಅವಕಾಶ ನೀಡಿ ಮೂರು ತಿಂಗಳ ಒಳಗೆ ವಿಷಯವನ್ನು ತೀರ್ಮಾನಿಸತಕ್ಕದ್ದು.

..............................................................................................



(3) ಸ್ಥಳೀಯ ಪ್ರಾಧಿಕಾರದ ತೀರ್ಮಾನದಿಂದ ಬಾಧಿತನಾದ ಯಾವುದೇ ವ್ಯಕ್ತಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಅಥವಾ ಪರಿಚ್ಛೇದ 31ರ ಉಪ ಪರಿಚ್ಛೇದ (3)ರಲ್ಲಿ ನಿಗದಿ ಗೊಳಿಸಿದ ಯಾವುದೇ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಬಹುದು.

(4) ಉಪ ಪರಿಚ್ಛೇದ (3) ರ ಅಡಿಯಲ್ಲಿ ಸಲ್ಲಿಸಿದ ಮೇಲ್ಮನವಿಯನ್ನು ಸಂದರ್ಭಕ್ಕನುಗುಣವಾಗಿ ರಾಜ್ಯ ಮಕ್ಕಳ ಹಕ್ಕು ರಕ್ಷಣಾ ಆಯೋಗ, ಅಥವಾ ಪರಿಚ್ಛೇದ 31ರ ಉಪ ಪರಿಚ್ಛೇದ (3)ರಲ್ಲಿ ನಿಗದಿಗೊಳಿಸಿದ ಯಾವುದೇ ಪ್ರಾಧಿಕಾರವು ಪರಿಚ್ಛೇದ 31 ಉಪಪರಿಚ್ಛೇದ (1)ರ ಕಲಂ (ಸಿ) ಅಡಿಯಲ್ಲಿ ತೀರ್ಮಾನಿಸತಕ್ಕದ್ದು.

(ರಾಷ್ಟ್ರೀಯ ಸಲಹಾ ಪರಿಷತ್ತಿನ ರಚನೆ) (ಎಡ ಮಾರ್ಜಿನ್ನಿನಲ್ಲಿದೆ)

33. (1) ಕೇಂದ್ರ ಸರ್ಕಾರವು ತನಗೆ ಅವಶ್ಯಕವೆಂದು ಕಂಡುಬಂದಲ್ಲಿ, ಸದಸ್ಯರ ಸಂಖ್ಯೆ ಹದಿನೈದಕ್ಕೆ ಮೀರದಂತೆ, ಪ್ರಾಥಮಿಕ ಶಿಕ್ಷಣ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರಗಳಲ್ಲಿ ಜ್ಞಾನ ಮತ್ತು ಪ್ರಾಯೋಗಿಕ ಅನುಭವವುಳ್ಳ ವ್ಯಕ್ತಿಗಳು ಸದಸ್ಯರಾಗಿ ಉಳ್ಳ ರಾಷ್ಟ್ರೀಯ ಸಲಹಾ ಪರಿಷತ್ತನ್ನು ಅಧಿಸೂಚನೆಯ ಮೂಲಕ ರಚಿಸತಕ್ಕದ್ದು.

(2) ಈ ಕಾಯಿದೆಯಲ್ಲಿನ ನಿಬಂಧನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಬಗೆಗೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು ರಾಷ್ಟ್ರೀಯ ಸಲಹಾ ಪರಿಷತ್ತಿನ ಕಾರ್ಯವಾಗಿರುತ್ತದೆ.

(3) ರಾಷ್ಟ್ರೀಯ ಸಲಹಾ ಪರಿಷತ್ತಿನ ಸದಸ್ಯರ ಭತ್ಯೆ, ನಿಯಮ, ನಿಬಂಧನೆಗಳು ನಿಗದಿಗೊಳಿಸಿದಂತೆ ಇರುತ್ತವೆ.

(ರಾಜ್ಯ ಸಲಹಾ ಪರಿಷತ್ತಿನ ರಚನೆ) ( ಎಡ ಮಾರ್ಜಿನ್ನಿನಲ್ಲಿದೆ)

34. (1) ರಾಜ್ಯ ಸರ್ಕಾರವು ತನಗೆ ಅವಶ್ಯಕವೆಂದು ಕಂಡುಬಂದಲ್ಲಿ, ಸದಸ್ಯರ ಸಂಖ್ಯೆ ಹದಿನೈದಕ್ಕೆ ಮೀರದಂತೆ, ಪ್ರಾಥಮಿಕ ಶಿಕ್ಷಣ ಮತ್ತು ಮಕ್ಕಳ ಅಭಿವೃದ್ಧಿ ಕ್ಷೇತ್ರಗಳಲ್ಲಿ ಜ್ಞಾನ ಮತ್ತು ಪ್ರಾಯೋಗಿಕ ಅನುಭವವುಳ್ಳ ವ್ಯಕ್ತಿಗಳು ಸದಸ್ಯರಾಗಿ ಉಳ್ಳ ರಾಜ್ಯ ಸಲಹಾ ಪರಿಷತ್ತನ್ನು ಅಧಿಸೂಚನೆಯ ಮೂಲಕ ರಚಿಸತಕ್ಕದ್ದು.

(2) ಈ ಕಾಯಿದೆಯಲ್ಲಿನ ನಿಬಂಧನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಬಗೆಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು ರಾಜ್ಯ ಸಲಹಾ ಪರಿಷತ್ತಿನ ಕಾರ್ಯವಾಗಿರುತ್ತದೆ.

(3) ರಾಜ್ಯ ಸಲಹಾ ಪರಿಷತ್ತಿನ ಸದಸ್ಯರ ಭತ್ಯೆ, ನಿಯಮ ನಿಬಂಧನೆಗಳು ನಿಗದಿಗೊಳಿಸಿದಂತೆ ಇರುತ್ತವೆ.

## ಅಧ್ಯಾಯ VII

## ಇತರೆ

(ನಿರ್ದೇಶಿಸುವ ಅಧಿಕಾರ) (ಎಡ ಮಾರ್ಜಿನ್ನಿನಲ್ಲಿದೆ)

35. (1) ಈ ಕಾಯಿದೆಯಲ್ಲಿನ ನಿಬಂಧನೆಗಳನ್ನು ಜಾರಿಗೊಳಿಸುವ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರ, ಸಂದರ್ಭಕ್ಕನುಸಾರವಾಗಿ ಸಮುಚಿತ ಸರ್ಕಾರಕ್ಕಾಗಲೀ, ಸ್ಥಳೀಯ ಪ್ರಾಧಿಕಾರಕ್ಕಾಗಲೀ, ತನಗೆ ಸರಿಯೆನಿಸಿದ ಮಾರ್ಗದರ್ಶನಗಳನ್ನು ನೀಡಬಹುದು.

(2) ಈ ಕಾಯಿದೆಯಲ್ಲಿರುವ ನಿಬಂಧನೆಗಳನ್ನು ಜಾರಿಗೊಳಿಸುವ ಕುರಿತು ಸಮುಚಿತ ಸರ್ಕಾರವು, ತನಗೆ ಸರಿಯೆನಿಸಿದ ಮಾರ್ಗದರ್ಶನ ಮತ್ತು ನಿರ್ದೇಶನಗಳನ್ನು ಸ್ಥಳೀಯ ಪ್ರಾಧಿಕಾರ ಅಥವಾ ಶಾಲಾ ನಿರ್ವಹಣಾ ಸಮಿತಿಗೆ ನೀಡಬಹುದು.

(3) ಈ ಕಾಯಿದೆಯಲ್ಲಿರುವ ನಿಬಂಧನೆಗಳನ್ನು ಜಾರಿಗೊಳಿಸುವ ಕುರಿತು, ಸ್ಥಳೀಯ ಪ್ರಾಧಿಕಾರ ತನಗೆ ಸರಿಯೆನಿಸಿದ ಮಾರ್ಗದರ್ಶನ ಮತ್ತು ನಿರ್ದೇಶನಗಳನ್ನು ಶಾಲಾ ನಿರ್ವಹಣಾ ಸಮಿತಿಗೆ ನೀಡಬಹುದು.

(ಕಾನೂನು ಕ್ರಮ ಜರುಗಿಸಲು ಪೂರ್ವಾನುಮತಿ) (ಎಡ ಮಾರ್ಜಿನ್ನಿನಲ್ಲಿದೆ)

36. ಸಮುಚಿತ ಸರ್ಕಾರ ಅಧಿಸೂಚನೆಯ ಮೂಲಕ ನಿಯುಕ್ತಿಗೊಳಿಸಿದ ಅಧಿಕಾರಿಯ ಪೂರ್ವಾನುಮತಿಯಿಲ್ಲದೆ, ಪರಿಚ್ಛೇದ 13 ರ ಉಪಪರಿಚ್ಛೇದ (2), ಪರಿಚ್ಛೇದ 18 ರ

ಉಪಪರಿಚ್ಛೇದ (5), ಹಾಗೂ ಪರಿಚ್ಛೇದ 19 ರ ಉಪಪರಿಚ್ಛೇದ (5), ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಗೆ ಸಂಬಂಧಿಸಿ ಯಾವುದೇ ಕಾನೂನಿನ ಕ್ರಮ ಜರುಗಿಸತಕ್ಕದ್ದಲ್ಲ.

(ಸದುದ್ದೇಶದ ಕಾರ್ಯಗಳಿಗೆ ರಕ್ಷಣೆ) ( ಎಡ ಮಾರ್ಜಿನ್ನಿನಲ್ಲಿದೆ)

37. ಈ ಕಾಯಿದೆಯ ಅನುಸಾರ ಅಥವಾ ಇದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮ ಅಥವಾ ಆದೇಶದ ಜಾರಿಗಾಗಿ ಕೈಗೊಂಡ ಸದುದ್ದೇಶದ ಕಾರ್ಯಕ್ಕೆ ಸಂಬಂಧಿಸಿ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಸ್ಥಳೀಯ ಪ್ರಾಧಿಕಾರ, ಶಾಲಾ ನಿರ್ವಹಣಾ ಸಮಿತಿ, ಅಥವಾ ಯಾವುದೇ ವ್ಯಕ್ತಿ, ವಿರುದ್ಧವಾಗಿ ದಾವೆ ಹೂಡುವುದು ಅಥವಾ ಕಾನೂನು ಕ್ರಮಗಳನ್ನು ಕೈಗೊಳ್ಳತಕ್ಕದ್ದಲ್ಲ.

(ನಿಯಮಗಳ ರಚನೆಗೆ ಸಮುಚಿತ ಸರ್ಕಾರದ ಅಧಿಕಾರ) ( ಎಡ ಮಾರ್ಜಿನ್ನಿನಲ್ಲಿದೆ)

38. (1) ಈ ಕಾಯಿದೆಯ ನಿಬಂಧನೆಗಳನ್ನು ಜಾರಿಗೊಳಿಸಲು ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಅಲ್ಲದೆ ನಿರ್ದಿಷ್ಟವಾಗಿ, ಈ ಮೇಲೆ ಉಕ್ತವಾದ ಅಧಿಕಾರಗಳ ಸಾಧಾರಣ ಸ್ವರೂಪಕ್ಕೆ ಚ್ಯುತಿ ಬಾರದಿರುವಂತೆ, ಅಂತಹ ನಿಯಮಗಳು ಈ ಕೆಳಗಿನ ಎಲ್ಲಾ ಅಥವಾ ಯಾವುದೇ ಒಂದು ವಿಷಯಕ್ಕೆ ಅನ್ವಯಿಸಬಹುದಾಗಿದೆ:-

ಅವುಗಳೆಂದರೆ:-

(ಎ) ಪರಿಚ್ಛೇದ 4 ರ ಮೊದಲ ನಿಬಂಧನೆಯಲ್ಲಿ ವಿಶೇಷ ತರಬೇತಿ ನೀಡುವ ಕ್ರಮ ಮತ್ತು ಕಾಲ ಮಿತಿ;

........................................................................



(ಬಿ) ಪರಿಚ್ಛೇದ 6 ರ ಅಡಿಯಲ್ಲಿ ನೆರೆಹೊರೆಯ ಶಾಲೆಯನ್ನು ಸ್ಥಾಪಿಸಲು ಪ್ರದೇಶ ಅಥವಾ ಮಿತಿಗಳು;

(ಸಿ) ಪರಿಚ್ಛೇದ 9 ರ (ಡಿ) ಖಂಡಿಕೆಯ ಅಡಿಯಲ್ಲಿ, ಹದಿನಾಲ್ಕು ವಯಸ್ಸಿನವರೆಗಿನ ಮಕ್ಕಳ ದಾಖಲಾತಿಗಳ ನಿರ್ವಹಣೆ ಮತ್ತು ಅದರ ವಿಧಾನ;

(ಡಿ) ಪರಿಚ್ಛೇದ 12 ರ ಕಲಂ (2) ಅಡಿಯಲ್ಲಿ ಖರ್ಚು ವೆಚ್ಚಗಳನ್ನು ತುಂಬಿ ಕೊಡುವ ವಿಧಾನ ಮತ್ತು ಮಿತಿ;

(ಇ) ಪರಿಚ್ಛೇದ 14 ರ ಉಪ ಪರಿಚ್ಛೇದ (1) ರ ಅಡಿಯಲ್ಲಿ ಮಗುವಿನ ವಯಸ್ಸು ನಿರ್ಧಾರ ಮಾಡುವ ಇನ್ನಿತರ ದಾಖಲಾತಿ;

(ಎಫ್) ಪರಿಚ್ಛೇದ 15 ರ ಅಡಿಯಲ್ಲಿ ಪ್ರವೇಶಾತಿಗೆ ವಿಸ್ತೃತಗೊಳ್ಳುವ ಅವಧಿ, ಮತ್ತು ವಿಸ್ತೃತ ಅವಧಿಯ ನಂತರ ಪ್ರವೇಶ ಹೊಂದಿದರೆ ಅಧ್ಯಯನ ಪೂರ್ಣಗೊಳಿಸುವ ವಿಧಾನ;

(ಜಿ) ಪರಿಚ್ಛೇದ 18 ರ ಉಪ ಪರಿಚ್ಛೇದ (1) ಅಡಿಯಲ್ಲಿ ಮಾನ್ಯತಾ ಪ್ರಮಾಣ ಪತ್ರಕ್ಕೆ ಅರ್ಜಿ ಹಾಕಬೇಕಾದ ಪ್ರಾಧಿಕಾರ, ನಮೂನೆ ಮತ್ತು ವಿಧಾನ;

(ಎಚ್) ಪರಿಚ್ಛೇದ 18 ರ ಉಪ ಪರಿಚ್ಛೇದ (3)ರ ಅಡಿಯಲ್ಲಿ ಮಾನ್ಯತಾ ಪ್ರಮಾಣ ಪತ್ರ ನೀಡಲು ಬೇಕಾದ ನಮೂನೆ, ಅವಧಿ, ವಿಧಾನ ಮತ್ತು ಷರತ್ತುಗಳು;

(ಐ) ಪರಿಚ್ಛೇದ 18ರ ಉಪ ಪರಿಚ್ಛೇದ (3) ರ ಅಡಿಯಲ್ಲಿ, ಎರಡನೆಯ ಕರಾರಿನ ಪ್ರಕಾರ ಅಹವಾಲು ಹೇಳಲು ಅವಕಾಶ ನೀಡುವ ವಿಧಾನ;

(ಜೆ) ಪರಿಚ್ಛೇದ 21ರ ಪರಿಚ್ಛೇದ (2)ರ ಕಲಂ (ಡಿ) ಅಡಿಯಲ್ಲಿ ಶಾಲಾ ನಿರ್ವಹಣಾ ಸಮಿತಿ ನಿರ್ವಹಿಸಬೇಕಾದ ಇತರೆ ಕಾರ್ಯಗಳು;

(ಕೆ) ಪರಿಚ್ಛೇದ 22ರ ಉಪ ಪರಿಚ್ಛೇದ (1)ರ ಅಡಿಯಲ್ಲಿ ಶಾಲಾ ಅಭಿವೃದ್ಧಿ ಯೋಜನೆಯನ್ನು ಸಿದ್ಧ ಪಡಿಸುವ ವಿಧಾನ;

(ಎಲ್) ಪರಿಚ್ಛೇದ 23ರ ಉಪ ಪರಿಚ್ಛೇದ (3)ರ ಅಡಿಯಲ್ಲಿ ಶಿಕ್ಷಕರ ಸೇವೆಯ ನಿಯಮ ನಿಬಂಧನೆಗಳು ಮತ್ತು ಅವರ ವೇತನ ಮತ್ತು ಭತ್ಯಗಳು;

(ಎಮ್) ಪರಿಚ್ಛೇದ 24ರ ಉಪ ಪರಿಚ್ಛೇದ (ಎಲ್)ರ ಕಲಂ (ಎಫ್) ಖಂಡಿಕೆಯ ಅಡಿಯಲ್ಲಿ ಶಿಕ್ಷಕರು ನಿರ್ವಹಿಸಬೇಕಾದ ಕರ್ತವ್ಯಗಳು;

(ಎನ್) ಪರಿಚ್ಛೇದ 24ರ ಉಪ ಪರಿಚ್ಛೇದ (3)ರ ಅಡಿಯಲ್ಲಿ ಶಿಕ್ಷಕರ ಕುಂದು ಕೊರತೆ ನಿವಾರಿಸುವ ವಿಧಾನ;

(ಒ) ಪರಿಚ್ಛೇದ 30ರ ಉಪ ಪರಿಚ್ಛೇದ (2)ರ ಅಡಿಯಲ್ಲಿ, ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಿದ ಪ್ರಮಾಣ ಪತ್ರ ಕೊಡುವ ವಿಧಾನ ಮತ್ತು ನಮೂನೆ;

(ಪಿ) ಪರಿಚ್ಛೇದ 31ರ ಉಪಪರಿಚ್ಛೇದ (3)ರ ಅಡಿಯಲ್ಲಿನ ಪ್ರಾಧಿಕಾರ ರಚನೆಯ ವಿಧಾನ ಹಾಗೂ ನಿಯಮ ನಿಬಂಧನೆಗಳು;

(ಕ್ಯೂ) ಪರಿಚ್ಛೇದ 34ರ ಉಪಪರಿಚ್ಛೇದ (3)ರ ಅಡಿಯಲ್ಲಿ ರಾಷ್ಟ್ರೀಯ ಸಲಹಾ ಮಂಡಳಿಯ ಸದಸ್ಯರ ನೇಮಕಕ್ಕೆ ಸಂಬಂಧಿಸಿ ಅವರ ಭತ್ಯೆಗಳು ಮತ್ತು ನೀತಿ ನಿಯಮಗಳು;

(ಆರ್) ಪರಿಚ್ಛೇದ 34ರ ಉಪಪರಿಚ್ಛೇದ (3)ರ ಅಡಿಯಲ್ಲಿ ರಾಜ್ಯ ಸಲಹಾ ಮಂಡಳಿಯ ಸದಸ್ಯರ ನೇಮಕಕ್ಕೆ ಸಂಬಂಧಿಸಿ ಅವರ ಭತ್ಯೆಗಳು ಮತ್ತು ನೀತಿ ನಿಯಮಗಳು;

(3) ಈ ಕಾಯಿದೆಯ ಅಡಿಯಲ್ಲಿ ಕೇಂದ್ರ ಸರಕಾರ ರಚಿಸಿದ ಪ್ರತಿಯೊಂದು ನಿಯಮವನ್ನೂ, ಪರಿಚ್ಛೇದ 20 ಹಾಗೂ ಪರಿಚ್ಛೇದ 23ರ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನೂ, ಅವುಗಳನ್ನು ರಚಿಸಿದ ಮೇಲೆ ಕೂಡಲೇ ಸಂಸತ್ತಿನ

ಉಭಯ ಸದನಗಳಲ್ಲಿ, ಅಧಿವೇಶನದ ಬೈಠಕ್ ನಡೆದಿರುವಾಗ, ಒಟ್ಟು 30 ದಿನಗಳ ವರೆಗೆ- ಅದು ಒಂದೇ ಅಧಿವೇಶನದಲ್ಲಾಗಿರಬಹುದು, ಇಲ್ಲವೇ ಎರಡು ಅಥವಾ ಹೆಚ್ಚಿನ ಅನುಕ್ರಮವಾದ ಅಧಿವೇಶನಗಳಲ್ಲಾಗಿರಬಹುದು- ಮಂಡಿಸತಕ್ಕದ್ದು; ಹಾಗೂ ಅಧಿವೇಶನ ಮುಗಿಯುವ ಮುನ್ನ ಅಥವಾ ಮೇಲೆ ಹೇಳಿದಂತೆ ಅನುಕ್ರಮವಾಗಿ ನಡೆದ ಅಧಿವೇಶನಗಳಲ್ಲಿ ಉಭಯ ಸದನಗಳೂ ನಿಯಮಗಳಲ್ಲಿ ಅಥವಾ ಅಧಿಸೂಚನೆಗಳಲ್ಲಿ ಯಾವುದಾದರೂ ತಿದ್ದುಪಡಿ ಮಾಡಬೇಕೆಂದು ತೀರ್ಮಾನಿಸಿದಲ್ಲಿ, ಅಥವಾ ಈ ನಿಯಮವನ್ನಾಗಲಿ, ಅಧಿಸೂಚನೆಯನ್ನಾಗಲಿ ರಚಿಸತಕ್ಕದ್ದಲ್ಲ ಎಂದಾಗಲಿ ತೀರ್ಮಾನಿಸಿದಲ್ಲಿ, ಸಾಂದರ್ಭಿಕವಾಗಿ, ಆ ನಿಯಮ ಮತ್ತು ಅಧಿಸೂಚನೆಗಳು ತಿದ್ದುಪಡಿ ಮಾಡಿದ ರೂಪದಲ್ಲಿ ಊರ್ಜಿತಕ್ಕೆ ಬರುವವು, ಅಥವಾ ನಿಯಮ ಮತ್ತು ಅಧಿಸೂಚನೆಗಳು ರದ್ದುಗೊಳ್ಳುತ್ತವೆ. ಅದೇನೇ ಇದ್ದರೂ ಈ ತಿದ್ದುಪಡಿಗಳು ಅಥವಾ ರದ್ದುಪಡಿಸುವಿಕೆಯು ಆ ನಿಯಮಗಳು ಹಾಗೂ ಅಧಿಸೂಚನೆಗಳ ಅಡಿಯಲ್ಲಿ ಹಿಂದೆ ಕೈಗೊಂಡಂತಹ ಯಾವುದೇ ಕಾರ್ಯಗಳ ಸಿಂಧುತ್ವವನ್ನು ಬಾಧಿಸತಕ್ಕದ್ದಲ್ಲ.)

(4) ಈ ಕಾಯಿದೆಯ ಅಡಿಯಲ್ಲಿ ರಾಜ್ಯ ಸರ್ಕಾರ ಮಾಡುವ ಪ್ರತಿ ನಿಯಮ ಅಥವಾ ಅಧಿಸೂಚನೆಗಳನ್ನು, ಅವುಗಳು ರಚಿತವಾದ ಕೂಡಲೇ ವಿಧಾನ ಮಂಡಲದ ಮುಂದೆ ಇರಿಸತಕ್ಕದ್ದು.

---



## ಅನುಬಂಧ
## (ಪರಿಚ್ಛೇದ 19 ಮತ್ತು 25ನ್ನು ನೋಡಿ)
## ಶಾಲೆಯ ನಿಯಮಗಳು ಮತ್ತು ಮಾನದಂಡಗಳು

| ಕ್ರಮ ಸಂಖ್ಯೆ | ವಿಷಯ | ಸಂಪ್ರದಾಯ ಮತ್ತು ಮಾನದಂಡ |
|---|---|---|
| 1. ಶಿಕ್ಷಕರ ಸಂಖ್ಯೆ (ಎ) ಒಂದನೆ ತರಗತಿಯಿಂದ ಐದನೆಯ ತರಗತಿಯ ವರೆಗೆ | ಪ್ರವೇಶಾತಿ ಹೊಂದಿದ ಮಕ್ಕಳ ಸಂಖ್ಯೆ ಅರವತ್ತರ ವರೆಗೆ<br>ಅರವತ್ತೊಂದರಿಂದ ತೊಂಭತ್ತರ ನಡುವೆ<br>ತೊಂಭತ್ತೊಂದರಿಂದ ಒಂದು ನೂರಾ ಇಪ್ಪತ್ತೈದರ ನಡುವೆ<br>ಒಂದು ನೂರಾ ಇಪ್ಪತ್ತೊಂದ-ರಿಂದ ಎರಡು ನೂರರ ವರೆಗೆ<br>ಒಂದು ನೂರಾ ಐವತ್ತರ ಮೇಲೆ<br><br>ಎರಡು ನೂರರ ಮೇಲೆ | ಶಿಕ್ಷಕರ ಸಂಖ್ಯೆ ಎರಡು<br>ಮೂರು<br>ನಾಲ್ಕು<br>ಐದು<br>ಐದು ಶಿಕ್ಷಕರು ಮತ್ತು ಒಬ್ಬ ಮುಖ್ಯ ಶಿಕ್ಷಕ<br>(ಮುಖ್ಯ ಶಿಕ್ಷಕನನ್ನು ಹೊರತು ಪಡಿಸಿ) ವಿದ್ಯಾರ್ಥಿ ಶಿಕ್ಷಕರ ಅನುಪಾತವು ನಲವತ್ತನ್ನು ಮೀರ ಬಾರದು. |

| | | |
|---|---|---|
| (ಬಿ) ಆರನೆಯ ತರಗತಿಯಿಂದ ಎಂಟನೆಯ ತರಗತಿಯ ವರೆಗೆ | ಕೆಳಗಿನ ಪ್ರತಿ ವಿಷಯಕ್ಕೆ ಒಬ್ಬ ಶಿಕ್ಷಕರಿರುವಂತೆ ಪ್ರತಿ ತರಗತಿಗೆ ಒಬ್ಬ ಶಿಕ್ಷಕ;<br>(i) ವಿಜ್ಞಾನ ಮತ್ತು ಗಣಿತ<br>(ii)ಸಮಾಜ ಅಧ್ಯಯನ,<br>(iii) ಭಾಷೆಗಳು<br>(2) ಪ್ರತಿ ಮೂವತ್ತೈದು ಮಕ್ಕಳಿಗೆ ಒಬ್ಬ ಶಿಕ್ಷಕ.<br>(3) ಮಕ್ಕಳ ಪ್ರವೇಶಾತಿ ಒಂದು ನೂರನ್ನು ಮೀರಿರುವ ಶಾಲೆಗಳಲ್ಲಿ,<br>(i) ಪೂರ್ಣಾವಧಿ ಮುಖ್ಯ ಶಿಕ್ಷಕ:<br>(ii) ಅಂಶ ಕಾಲಿಕ ಶಿಕ್ಷಕರು:-<br>(ಎ) ಕಲಾ ಶಿಕ್ಷಣ<br>(ಬಿ) ಆರೋಗ್ಯ ಮತ್ತು ಶಾರೀರಿಕ ಶಿಕ್ಷಣ<br>(ಸಿ)ಕಾರ್ಯಾನುಭವ ಶಿಕ್ಷಣ | |
| 2. ಕಟ್ಟಡ | ಕೆಳಗಿನವುಗಳನ್ನು ಒಳಗೊಂಡ ಸರ್ವ ಋತು ಕಟ್ಟಡ—<br>(i) ಪ್ರತಿ ಶಿಕ್ಷಕರಿಗೆ ಒಂದರಂತೆ ತರಗತಿಯ ಕೊಠಡಿಗಳು ಮತ್ತೊಂದು ಕಛೇರಿ-ಕಮ್-ದಾಸ್ತಾನು ಸಂಗ್ರಹ-ಕಮ್ ಮುಖ್ಯ ಶಿಕ್ಷಕರ ಕೊಠಡಿ,<br>(ii) ತಡೆ ರಹಿತ ಪ್ರವೇಶಾವಕಾಶ;<br>(iii) ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳು;<br>(iv) ಎಲ್ಲಾ ಮಕ್ಕಳಿಗೆ ಸಾಕಷ್ಟು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ;<br>(v) ಶಾಲೆಗಾಗಿ ಮಧ್ಯಾಹ್ನದ ಬಿಸಿಯೂಟ ತಯಾರಿಸಲು ಅಡುಗೆಯ ಮನೆ;<br>(vi) ಆಟದ ಬಯಲು;<br>(vii) ಆವರಣ ಶಾಲಾ ಆವರಣವನ್ನು ರಕ್ಷಿಸಿಕೊಳ್ಳಲು ಆವರಣ ಗೋಡೆ ಅಥವಾ ಬೇಲಿಯ ವ್ಯವಸ್ಥೆ. | |

| **ಕ್ರಮ ಸಂಖ್ಯೆ** | **ವಿಷಯ** | **ಸಂಪ್ರದಾಯ ಮತ್ತು ಮಾನದಂಡ** |
|---|---|---|
| 3. ಶೈಕ್ಷಣಿಕ ವರ್ಷದಲ್ಲಿ ಕಾರ್ಯ ನಿರ್ವಹಿಸಬೇಕಾದ ಕನಿಷ್ಠ ದಿನಗಳು ಮತ್ತು ಕನಿಷ್ಠ ಬೋಧನಾ ಗಂಟೆಗಳು | (i) ಒಂದನೆ ತರಗತಿಯಿಂದ ಐದನೆಯ ತರಗತಿಯ ವರೆಗೆ ಇನ್ನೂರು ಕೆಲಸದ ದಿನಗಳು;<br>(ii) ಆರನೆಯ ತರಗತಿಯಿಂದ ಎಂಟನೆಯ ತರಗತಿಯ ವರೆಗೆ ಇನ್ನೂರ ಇಪ್ಪತ್ತು ಕೆಲಸದ ದಿನಗಳು:<br>(iii) ಒಂದನೆ ತರಗತಿಯಿಂದ ಐದನೆಯ ತರಗತಿಯ ವರೆಗೆ ಎಂಟು ನೂರು ಕೆಲಸದ ಗಂಟೆಗಳು<br>(iv) ಆರನೆಯ ತರಗತಿಯಿಂದ ಎಂಟನೆಯ ತರಗತಿಯ ವರೆಗೆ ಒಂದು ಸಾವಿರ ಕಲಿಕಾ ಗಂಟೆಗಳು | |
| 4. ಶಿಕ್ಷಕರಿಗೆ ಪ್ರತಿ ವಾರಕ್ಕೆ ಕೆಲಸ ಮಾಡಬೇಕಾಗಿರುವ ಗಂಟೆಗಳ ಕನಿಷ್ಠ ಸಂಖ್ಯೆ | ಸಿದ್ಧತೆ ಒಳಗೊಂಡಂತೆ ನಲವತ್ತೈದು ಬೋಧನಾ ಗಂಟೆಗಳು. | |
| 5. ಬೋಧನಾ ಕಲಿಕಾ ಸಾಮಗ್ರಿ | ಪ್ರತಿ ತರಗತಿಗೂ ಅಗತ್ಯವಿದ್ದಂತೆ ಪೂರೈಸುವುದು. | |
| 6. ಗ್ರಂಥಾಲಯ | ಸುದ್ದಿ ಪತ್ರಿಕೆಗಳು, ಪತ್ರಿಕೆಗಳು, ಕತೆಯ ಪುಸ್ತಕಗಳು ಒಳ ಗೊಂಡಂತೆ ಎಲ್ಲ ವಿಷಯಗಳ ಬಗೆಗಿನ ಪುಸ್ತಕಗಳನ್ನೂ ಹೊಂದಿರುವ ಗ್ರಂಥಾಲಯ ಪ್ರತಿ ಶಾಲೆಯಲ್ಲೂ ಇರಬೇಕು. | |
| 7. ಕ್ರೀಡಾ ಸಾಮಗ್ರಿಗಳು, ಆಟೋಟ ಸ್ಪರ್ಧೆಗಳ ಪರಿಕರಗಳು | ಪ್ರತಿ ತರಗತಿಗೂ ಅಗತ್ಯಕ್ಕೆ ಅನುಗುಣವಾಗಿ ಪೂರೈಸುವುದು. | |

**ಸಹಿ ಮಾಡಿದೆ**
**ಟಿ.ಕೆ ವಿಶ್ವನಾಥನ್,**
**ಕೇಂದ್ರ ಸರ್ಕಾರದ ಕಾರ್ಯದರ್ಶಿ**

ಪ್ರಧಾನ ವ್ಯವಸ್ಥಾಪಕರು, ಭಾರತ ಸರ್ಕಾರದ ಮುದ್ರಣಾಲಯ, ಮಿಂಟೋ ರಸ್ತೆ, ನವ ದೆಹಲಿ ಇವರಿಂದ ಮುದ್ರಿಸಲ್ಪಟ್ಟು

ಪ್ರಕಟಣಾ ನಿಯಂತ್ರಣಾಧಿಕಾರಿಗಳು, ದೆಹಲಿ, 2009 ಇವರಿಂದ ಪ್ರಕಟಿಸಲ್ಪಟ್ಟಿದೆ

ಜಿ.ಎಮ್.ಜಿ.ಐ.ಪಿ.ಎಮ್.ಆರ್.ಎನ್.ಡಿ—3843—26-08-2009.

ಡಾ.ಎ.ಜಿ. ಗೋಪಾಲ ಕೃಷ್ಣ ಕೊಳ್ತಾಯ

ಭವಾನೀ,
ಮೊದಲ ಮುಖ್ಯ ಎಂಟನೆಯ ಅಡ್ಡ ರಸ್ತೆ
ಬಸವೇಶ್ವರ ನಗರ
ಶಿವಮೊಗ್ಗ; 577204
ಜಂಗಮ ದೂರವಾಣಿ;9731147198
ಮನೆ: (08182-276097)